ಕನ್ನಡ ನಾಡಗೀತೆಗಳು

ಸಾಮಾನ್ಯ

ಅರಳರಳು ಮೊಗ್ಗೆ ಬಿರಿದರಳು **ರಾಗ: ಹಂಸಧ್ವನಿ**

ಅರಳರಳು ಮೊಗ್ಗೆ ಬಿರಿದರಳು ಮೊಗ್ಗೆ ನೀ ಆನಂದದ ಬುಗ್ಗೆ। ಹೃದಯ ಮೇರುವ ಬಳಸಿ ಜ್ಞಾನ ಸೂರ್ಯನು ಜನಿಸೆ। ಅರಳುತಿಹುದೀ ಮೊಗ್ಗೆ ಕಾವ್ಯ ಬುಗ್ಗೆ॥1॥ ಕನ್ನಡದ ಉಸಿರಾಗಿ ಚೇತನದ ಹಸಿರಾಗಿ। ತೊಳಗುತಿಹುದೀ ಮೊಗ್ಗೆ ಸೌಂದರ್ಯ ಬುಗ್ಗೆ। ಕನ್ನುಡಿಯ ಸೌರಭವ ಕರುನಾಡು ಸಂಭ್ರಮವ ಸುರಿಸುತಿಹುದೀ ಮೊಗ್ಗೆ ಪ್ರೇಮಬುಗ್ಗೆ॥2॥ ಕನ್ನಡಕೆ ಕಂಪಾಗಿ ಕೇಳ್ವರಿಗೆ ಇಂಪಾಗಿ। ಸುರಿಸುತಿಹುದೀ ಮೊಗ್ಗೆ ಸುಧೆಯ ಬುಗ್ಗೆ। ಕನ್ನಡಕೆ ಕಲಿತನವ ಸೌಂದರ್ಯ ಸಂಪದವ ತೋರುತಿಹುದೀ ಮೊಗ್ಗೆ ಶಕ್ತಿ ಬುಗ್ಗೆ॥3॥ ಕನ್ನಡದ ಚೆನ್ನೆಯು ನುಡಿವ ಮಾಣಿಕವಾಗಿ। ಅರಳುತಿಹುದೀ ಬುಗ್ಗೆ ಆನಂದ ಬುಗ್ಗೆ। ನುಡಿಗಾತ್ಮ ತುಂಬುತಲಿ ಅಮೃತಗಾನವನೀಯುತಲಿ। ಅರಳುತಿಹುದೀ ಮೊಗ್ಗೆ ಸಿರಿಯ ಬುಗ್ಗೆ॥4॥

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ **ರಾಗ: ಆನಂದಭೈರವಿ**

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ। ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ। ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ। ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ। ದಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ। ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾದೇಶ ಮೊಪ್ಪಿರ್ದುದು॥1॥ ಕಂಜಕುಮುದಂಗಳಿಲ್ಲದ ಸರಂ। ಸರದಿಂದೆ ರಂಜಿಸದ ಶುಕಪಿಕಂ। ಶುಕಪಿಕಂಗಳ್ಗೆ ಫಲ। ಮಂಜರಿಯನೀಯದಿಹ ಮಾವು। ಮಾವುಗಳನಪ್ಪದ ಬಳ್ಳಿ ಬಳ್ಳಿಗಳೊಳು। ಮಂಜುಳ ಧ್ವನಿಗುಡದ ಪರಮೆ। ಪರಮೆಗೆ ಸಂತಸಂ ಜನಿಸದರಲರಲ ನವ ಪರಿಮಳಂಗಳಿಂ। ದಂ ಜಡಿಯದೆಳೆಗಾಳಿ। ಎಳೆಗಾಳಿಯಿಲ್ಲದಿಹ ಬನವಿಲ್ಲವಾನಾಡೊಳು। ಕರ್ನಾಡ ದೇಶದೊಳ್॥2॥

ಇದು ನಮ್ಮ ನಾಡು ಬಲು **ರಾಗ: ಖರಹರಪ್ರಿಯ**

ಇದು ನಮ್ಮ ನಾಡು ಬಲು ಕವಿಗಳ ಬೀಡು। ಸೃಷ್ಟಿಯ ಸುಂದರ ಹಾಡು ಇದು ನಮ್ಮ ನಾಡು॥ ಪಂಪರನ್ನ ರತ್ನಾಕರ ಹರಿಹರ ಸೋಮೇಶ್ವರ ಸರ್ವಜ್ಞ। ಕನ್ನಡ ನಾಡಿನ ಸೇವೆಯಗೈದಾ ಇವರೆಲ್ಲರ ನೆಲೆ ಧನ್ಯ॥ ಸಾಹಿತ್ಯದ ಶ್ರೀದೇವಿಯ ಭಕ್ತರು ಇವರಿಗೆ ಕರಜೋಡಿಸಿ ಇಂದು। ಇಲ್ಲಿ ಕದಂಬರ ಪುರ ಬನವಾಸಿಯು ಮೆರೆದಿದೆ ಹಸಿರನ್ನು ಹಾಸಿ। ಕಾವೇರಿಯು ಗೋದಾವರಿ ತುಂಗ ನದಿಗಳು ಹರಿದಿವೆ ಸೂಸಿ ಹಸಿರಿನ ಹೊಲ ಬಣ್ಣದ ಹೂದೋಟವು ತೆಂಗಿನ ವನಸಿರಿ ನೋಡು ॥ಇದು॥

ಇದುವೆ ಶಕ್ತಿಯು ಇದುವೆ ಭಕ್ತಿಯು **ರಾಗ: ಹಂಸಾನಂದಿ**

ಇದುವೆ ಶಕ್ತಿಯು ಇದುವೆ ಭಕ್ತಿಯು ಇದುವೆ ಇಹಪರಮುಕ್ತಿಯು। ನಾಡು ಕನ್ನಡ ಬಾಳು ಕನ್ನಡ ನುಡಿಯು ಕನ್ನಡ ಎಮ್ಮದು। ಎಂಬ ಘೋಷವು ಎಲ್ಲರ ಮನದಲಿ ಸೇರಿತೆಲ್ಲೆಡೆ ಮೆರೆವುದು॥ಪ॥ ಹೆಜ್ಜೆ ಗೆಜ್ಜೆಯ ಝುಲ್ಲ ಝುಣ ಝುಣ ಒಳಗೆ ಅಡಗಿದೆ ಕನ್ನಡ। ಬಡಿವ ಮದ್ದಳೆ ತಾಳ ಮೇಳದಿ ನಲಿದು ಬರುತಿದೆ ಕನ್ನಡ॥2ಸಾರಿ॥ ಮಿಡಿವ ತಂತಿಯ ನಾದ ಬ್ರಹ್ಮದಿ ತೇಲಿ ಬರುತಿದೆ ಕನ್ನಡ। ಅಲ್ಲೆ ಆಲಿಸಿ ಅಲ್ಲೆ ಲಾಲಿಸಿ ಅದುವೆ ನಮ್ಮ ಕನ್ನಡ॥1॥ ವೀರ ಹೊಯ್ಸಳ ಧೀರ ಚಾಲುಕ್ಯರುದಿಸಿ ಆಳಿದ ನಾಡಿದು। ಗಂಡುಗಲಿ ಪುಲಿಕೇಶಿ ಜನಪ್ರಿಯ ಕೃಷ್ಣದೇವನ ಬೀಡಿದು। ಶಿಲ್ಪ ಕುಶಲರು ಜಕಣ ಡಕಣರು ಖ್ಯಾತಿ ಪಡೆದಿಹ ಬೀಡಿದು। ಸಕಲ ವಿದ್ಯೆಯ ಶಿಲ್ಪ ಶಾಸ್ತ್ರವೇ ಬೆಳಗಿ ಬಂದಿಹ ಬೀಡಿದು॥2॥ ಕನ್ನಡಮ್ಮನ ಗುಡಿಯ ಗೋಪುರ ಹೊನ್ನ ಕಲಶವು ಮಿನುಗಲಿ। ಅವಳ ಗದ್ದುಗೆ ತೆಲುಗು ತಮಿಳರ ನಡುವೆ ಭವ್ಯದಿ ಮೆರೆಯಲಿ। ಪದ್ಯ ಗದ್ಯವೆ ಗಥೆಯು ನಾಟಕ ಕಾವ್ಯ ಮಾಲೆಯ ಧಾರಿಣಿ। ಸತ್ಯ ಸುಂದರ ನಿತ್ಯ ನೂತನ ಶಿಲ್ಪ ಸಂಭ್ರಮವಾಹಿನಿ॥3॥

ಈ ಕರುನಾಡಿದು ನನ್ನ ಮನೆ **ರಾಗ: ಮೋಹನ**

ಈ ಕರುನಾಡಿದು ನನ್ನ ಮನೆ। ನನ್ನ ಮನೆ ಇದು ನನ್ನ ಮನೆ।।ಪ।। ನೀಲಗಗನದಾ ಹಂದರ ಹೊದೆದಾ। ಬಾಂದಳದಂಚನು ಬಳಸಿರುವಾ। ಅತ್ತ ಇತ್ತ ಮುನ್ನೀರಂಗಣದ। ಸುತ್ತ ಮುತ್ತ ಕುಡು ಮಲೆನಾಲ್ಗೋಡೆಯ।।1।। ಕಡಲ ಕರೆಯ ತಲೆ ತೂಗುವ ತೆಂಗು। ಗಾಳಿ ವಟ್ಟಿಯಲಿ ಒಲೆಯುವ ಕಂಗು। ಕರ್ರೊನ್ನಿನ ನೆಲ ಅಚ್ಚ ಹಸಿರು ಹೊಲ। ಚೆಲುವು ಹೊನಲು ಹರಿವೀ ಕರುನಾಡು।।2।। ಹೊಂಗೆಯ ತಳಿರ ತೊಂಗಲ ತೋರಣ। ಸೌರಭ ಸೂಸುವ ಮಂದ ಸಮೀರನ। ಕಲರವ ಕೂಕೂ ಕೋಕಿಲ ಗಾನ। ಸರ್ವ ಸುಖದ ಬೆಳೆ ನೆಲೆ ಈ ನಾಡು।।3।।

ಉತ್ತರ ಕನ್ನಡ ದಕ್ಷಿಣ ಕನ್ನಡ **ರಾಗ: ಸಿಂಧುಭೈರವಿ**

ಉತ್ತರ ಕನ್ನಡ ದಕ್ಷಿಣ ಕನ್ನಡ ಮೈಸೂರೆಂಬ ವಾದ। ಮರೆತೇ ಬಿಡುವ ಏನೆಷ್ಟಿರಲಿ ಅಂತಃಕಲಹದ ಭೇದ। ನಾಡ ಪ್ರಗತಿಗೆ ದುಡಿಯೋಣ ಸುಖ ಸಮೃದ್ಧಿಯ ಕಾಣೋಣ। ಮಾದರಿಯಾಗಿ ಬಾಳೋಣ।। ಕನ್ನಡ ನಮ್ಮ ಮಾನ ಕನ್ನಡ ನಮ್ಮ ಪ್ರಾಣ। ಕನ್ನಡವೇ ಸುಜ್ಞಾನ ನಮ್ಮ ಜೀವನ ಧ್ಯಾನ। ಜಯ ಕರ್ನಾಟಕ ಮಾತೆ ಜಯ ಕರ್ನಾಟಕ ಮಾತೆ। ಜಯ ಜಯ ಜಯ ಜಯ ಜಯ ಕರ್ನಾಟಕ ಮಾತೆ।। ಸಿರಿತನ ಬಡತನ ಏನೇ ಇರಲಿ ಕನ್ನಡದಾ ನೆಲೆಯಿರಲಿ। ನಕ್ಕರು ಸರಿಯೆ ಅತ್ತರು ಸರಿಯೆ ಕನ್ನಡದಾ ಮಡಿಲಿರಲಿ। ಸಾವೋ ಬದುಕೋ ಏನೇ ಬರಲಿ ಕನ್ನಡದಾ ಕಣದಲ್ಲಿ। ಬೆಳೆದರು ಸರಿಯೆ ಅಳಿದರು ಸರಿಯೆ ಕನ್ನಡದಾ ಛಲದಲ್ಲಿ।। ಭಾಷಾವಾರು ಪ್ರಾಂತ್ಯಗಳಿಂದು ನಿಂತೆಡೆ ನಿಂತರೆ ಸಾಕೆ। ಕನ್ನಡ ತನವನೆ ಕೀಳೆಂದಾರು ನಡೆ ನೀ ಮುನ್ನಡೆ ಜೋಕೆ। ಹೆತ್ತವಳಿಗೆ ನೀ ಸೇವೆಯ ಮಾಡಲು ಹೆರರುಪದೇಶ ಬೇಕೆ। ಹುಟ್ಟಿದ ಮಣ್ಣಿನ ಋಣ ತೀರಿಸಲು ಹೇಳಿಸಿಕೊಳ್ಳಬೇಕೆ।।

ಉದಯವಾಗಲಿ ನಮ್ಮ ಚೆಲುವ **ರಾಗ: ಮೋಹನ**

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು। ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು।।ಪ।। ರಾಜನ್ಯರಿಪು ಪರಶುರಾಮನಮ್ಮನಾಡು। ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು। ಓಜೆಯಿಂ ಮೆರೆದರಸುಗಳ ಸಾಹಸದ ಸೂಡು। ತೇಜವನು ನಮಗೀವ ವೀರ ವೃಂದದ ಬೀಡು।।1।। ಲೆಕ್ಕಿಗಮಿತಾಕ್ಷರರು ಬೆಳೆದು ಮೆರದಿಹ ನಾಡು। ಜಕ್ಕಣನ ಶಿಲ್ಪಕಲೆ ಅಚ್ಚರಿಯ ಕರುಗೋಡು। ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು। ಬೊಕ್ಕಸದ ಕಣಜವೈವಿದ್ವತ್ತೆಗಳ ಕಾಡು।।2।। ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು। ಕಾವೇರಿ ಗೋದೆಯರು ಮೈತೊಳೆವ ನಲುನಾಡು। ಆವಗಂ ಸ್ಫೂರ್ತಿಸುವ ಕಬ್ಬಿಗರ ನೆಡೆಮಾಡು। ಕಾವಗದುಗಿನ ವೀರ ನಾರಾಯಣನ ಬೀಡು।।3।।

ಎಲ್ಲಾದರು ಇರು ಎಂತಾದರು **ರಾಗ:ಸಾರಂಗ**

ಎಲ್ಲಾದರು ಇರು ಎಂತಾದರು ಇರು ಎಂದೆದಿಗು ನೀ ಕನ್ನಡವಾಗಿರು।।ಪ।। ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನ ಒಂದಿದ್ದರೆ ನೀನಮಗೆ ಕಲ್ಪತರು।। ನೀ ಮೆಟ್ಟುವ ನೆಲ ಅದೆ ಕರ್ನಾಟಕ ನೀನೇರುವ ಮಲೆ ಸಹ್ಯಾದ್ರಿ। ನೀ ಮುಟ್ಟುವ ಮರ ಶ್ರೀಗಂಧದ ಮರ। ನೀ ಕುಡಿಯುವ ನೀರ್ ಕಾವೇರಿ।। ಪಂಪನ ಓದುವ ನಿನ್ನಾ ನಾಲಗೆ ಕನ್ನಡವೇ ಸತ್ಯ। ಕುಮಾರವ್ಯಾಸನ ನಾಲಿಪ ಕಿವಿಯಿದು ಕನ್ನಡವೇ ನಿತ್ಯ। ಹರಿಹರ ರಾಘವರಿಗೆ ಎರಗುವ ಮನ। ಹಾಳಾಗಿಹ ಹಂಪೆಗೆ ಕೊರಗುವ ಮನ।ಪೆಂಪಿನ ಬನವಾಸಿಗೆ ಕರಗುವ ಮನ। ಕನ್ನಡವೇ ನಿತ್ಯ ಕನ್ನಡವೇ ಸತ್ಯ।। ಬೆಳ್ಗೊಳ ಬೇಲೂರ್‌ಗಳ ಕಡೆ ಸೆಳೆಯುವ ಮನ। ಜೋಗದ ಜಲಪಾತದಿ ಧುಮುಕುವ ಮನ।। ಕಾಜಾಣ ಗಿಣಿ ಕೋಗಿಲೆ ಇಂಪಿಗೆ। ಮಲ್ಲಿಗೆ ಸಂಪಿಗೆ ಕೇದಿಗೆ ಸೊಂಪಿಗೆ। ಮಾವಿನ ಹೊಂಗೆಯ ಇಂಪಿಗೆ ತಳಿರಿನ ತಂಪಿಗೆ। ರಸರೋಮಾಂಚನಗೊಳ್ಳುವ ತನುಮನ। ಎಲ್ಲಿದ್ದರು ನೀ, ಎಂತಿದ್ದರು ನೀ ಎಂದೆಂದಿಗೂ ತಾನ್ ಕನ್ನಡವೇ ಸತ್ಯ ಕನ್ನಡವೇ ನಿತ್ಯ।। ಕನ್ನಡ ನೆಲವೇ ನಿತ್ಯ ಅನ್ಯರ ನೆಲೆಯೇ ಮಿಥ್ಯಾ।।

ಎನಿತು ಇನಿದು ಈ ಕನ್ನಡ **ರಾಗ: ಕಾನಡ**

ಎನಿತು ಇನಿದು ಈ ಕನ್ನಡ ನುಡಿಯು। ಮನವನು ತಣಿಸುವ ಮೋಹನ ಸುಧೆಯು॥ಪ॥ ಗಾನವ ಬೆರೆಯಿಸಿ ವೀಣೆಯ ದನಿಯೊಳು। ವಾಣಿಯ ನೇವುರ ನುಡಿಸುತೆ ಕುಣಿಯಲು। ಮಾಣದೆ ಮೆರೆಯುವ ಮಂಜುಳ ರವವೋ॥1॥ ರಂಗನ ಮುರಲಿಯ ಹಿಂಗದ ಸರದಲಿ। ಹೆಂಗೆಳೆಯರು ಬೆಳದಿಂಗಳಿನಿರುಳಲಿ। ಸಂಗೀತದನೊರೆ ಗಂಧವಿದೇನೋ॥2॥ ಗಿಳಿಗಳು ಉಲಿಯುವ ಮೆಲು ಮಾತುಗಳೋ। ಕಲಕಂಠಗಳಾ ಚೆಲುವಿನ ಕುಕಿಲೋ। ಅಳಿಗಳ ಬಳಗದ ಬೆಳಗಿನ ಉಲಿಯೋ॥3॥

ಎಂಥ ಚಂದದ ಬಳ್ಳಿ **ರಾಗ: ಶ್ರೀರಂಜನಿ**

ಎಂಥ ಚಂದದ ಬಳ್ಳಿ ಚೆಲ್ಲವರಿದಿಹುದಿಲ್ಲಿ। ಚೆಲುವನರಸುವ ಜಾಣ ಬಂದು ನೋಡು। ಕನ್ನಡದ ಲಿಪಿಯಲ್ಲಿ ಕನ್ನಡದ ಕಲೆ ಎಲ್ಲೆಯನೆ ನಿಲುಕಿ ನಿಂದಿಹುದ ನೋಡಿ ಹಾಡು॥ ನಾಡ ಸೊಬಗೇ ಮರಳಿ ನಾಡಿಗರ ಹೃದಯದಲಿ। ಹೊಳೆದು ಕರದಿಂದಿಳಿದು ಬಂದಿರುವುದೇ? ಹೂಬಳ್ಳಿಯಂದದಲಿ ಸುಳಿದಿಂತು ಚಂದದಲಿ। ಲಿಪಿಯ ರೂಪವನಾಂತು ನಿಂದಿರುವುದೇ?॥ ಮೊಗ್ಗಿನಂದದಿ ಕೆಲವು ಮಲರಿನಂದದಿ ಹಲವು। ಕುಡಿ,ಪೀಚು, ಮಿಡಿಕಾಯ್ಗಳಂತೆ ಕೆಲವು। ಕನ್ನಡಕ್ಕರಗಳಿವು ಬಳ್ಳಿಯನು ಏರಿಹವು। ಬಗೆಯ ಬಳ್ಳಿಯನೆ ಅಲ್ಲಾಡಿಸುವವು॥ ಕಲ್ಲಿನಲಿ, ಕಾವ್ಯದಲಿ, ಓಲೆಯಲಿ, ಲೋಹದಲಿ ಭಿತ್ತಿಯಲಿ ಈ ಬಳ್ಳಿ ಸುಳಿದಿರುವುದು। ಚಾಲುಕ್ಯ ಕಲಚುರ್ಯ ಹೊಯ್ಸಳಾಧೀಶ್ವರರ ಯುಗಗಳಲಿ ಹೊಗರೇರಿ ಹರಡಿರುವುದು॥ ಕನ್ನಡಿಗರಾಂತರ್ಯದಿಂದಲೀ ಸೌಂದರ್ಯಲತೆ ಕೊನರಿ ನನೆ ಕೊನೆಯ ತಳೆದು ಬೆಳೆದು। ಕನ್ನಡಮ್ಮನ ಕೊರಲಸರಕೆ ಮಲ್ಲಿಗೆಯರಲ ಸಲ್ಲಿಸುವುದವಳಡಿಯ ಬಳಿಗೆ ಸುಳಿದು॥

ಎಂಥ ಚೆಲುವ ನಾಡು **ರಾಗ:ವಾಸಂತಿ-ಏಕತಾಳ**

ಎಂಥ ಚೆಲುವ ನಾಡು ಎಂಥ ಸೊಗದ ಬೀಡು। ಸುತ್ತ ತಿರುಗಿ ನೋಡು ನಮ್ಮ ಕನ್ನಡ ನಾಡು॥ಪ॥ ಅತ್ತ ನೋಡೆ ಗಿರಿಗಳು ಇತ್ತ ನೋಡೆ ನದಿಗಳು। ಸುತ್ತಮುತ್ತಲೆತ್ತಲೂ ಮುತ್ತಿನಂಥ ಕೆರೆಗಳು॥1॥ ಜೋಳ ಭತ್ತ ರಾಗಿಯು ಏಲಕ್ಕಿ ಮೆಣಸು ಕಾಫಿಯು। ಹತ್ತಿ ಅವರೆ ಎಳ್ಳು ಭೂಮಿಕೊಟ್ಟ ವರಗಳು॥2॥ ನಾಡ ಸೋಕಿ ಸಾಗರ ವಿದ್ಯುತ್ ಜ್ಯೋತಿ ಆಗರ। ನಮ್ಮನಾಡು ಸುಂದರ ಕಲೆಯು ಮೆರೆವ ದೇಗುಲ॥3॥ ಭರತ ಮಾತೆ ಕಣ್ಮಣಿಯೆ ನಿನಗೆ ಇಲ್ಲ ಯಾರು ಎಣೆ। ಹರಸು ನಮ್ಮ ಕರುಣೆಯೆ ನಮೋ(2ಸಾರಿ) ಧರಣಿಯೆ॥4॥

ಏನು ಚೆಲುವಿನ ನಾಡು **ರಾಗ:ತಿಲಂಗ್-ಖಂಡಏಕತಾಳ**

ಏನು ಚೆಲುವಿನ ನಾಡು ಚೆಲುವು ಚಿಮ್ಮುವ ನಾಡು। ನನ್ನೊಲುಮೆ ಈ ನಾಡು ಕರ್ನಾಟಕ। ನನ್ನ ಹಡೆದೀ ನಾಡು ಸಗ್ಗ ಸೌಧದ ಬೀಡು। ಸ್ವಾಗತವು ಏಕೈಕ ಕರ್ನಾಟಕ॥ ಹಾಲಹೊಳೆ ಜೇನುಮಳೆ ನನ್ನ ತಾಯ್ನುಡಿಯಲ್ಲಿ। ಗಿರಿನವಿಲು ಗರಿಗೆದರಿ ಆಡಿದಂತೆ। ಏಳು ಬಣ್ಣದ ಬಿಲ್ಲು ತಾಯ ಗಾಯನದಲ್ಲಿ। ಉಷೆ ಹಸೆಯಮಣೆ ಏರಿ ನೋಡಿದಂತೆ॥ ನನ್ನ ತಾಯಿಯ ಮಡಿಲತುಂಬೆಲ್ಲ ಮಲ್ಲಿಗೆಯು ಅವಳ ತೋಳ್ ತೊಡೆಗಳಲಿ ಮಾವು ತಳಿರು। ತೆಂಗು ಅಡಕೆಯ ಜಾಲ ಅವಳ ಬೈತಲೆ ನವಿರು। ಎಳ್ಳು ಜೀರಿಗೆ ಜೋಳ ಅವಳ ತೇರು॥ ಹುಡಿಯ ಕಣಕಣದಲ್ಲಿ ಅವಳ ಉಸಿರಿನ ಸೊಗಡು। ಪುಣ್ಯನದಿಗಳ ಕೂಡೆ ಅವಳ ಸರಸ। ಶತಶೃಂಗ ಸಹ್ಯಾದ್ರಿ ಸಿಂಹವಿಷ್ಟರದಲ್ಲಿ। ಹೇಮಕೂಟದ ಮೇಳ ಇಲ್ಲ ವಿರಸ॥ ಇದುವೆ ಕರ್ನಾಟಕವೊ। ನನ್ನ ಸಿರಿ ತವರೂರು। ಇದರ ಕರುಕೆಯ ಬಳ್ಳಿ ಬೆಳೆಯುತಿರಲಿ। ಕನ್ನಡಮ್ಮನ ಗುಡಿಯು ಬಾನಿನಲಿ ಬೆರೆಯಲಿ। ಅವಳ ಒಡಲಿನ ಚೆಲುಮೆ ಬತ್ತದಿರಲಿ॥ ಜಯತು ಕನ್ನಡ ನಾಡು। ಜಯತು ಮಂಗಲ ಬೀಡು। ಜಯಜಯತು ಜಯ ರಾಜರಾಜೇಶ್ವರೀ। ಜಯವು ಕನ್ನಡ ನುಡಿಗೆ। ಜಯವು ಕನ್ನಡ ಜನಕೆ। ಜಯ ನಿನಗೆ ಕರುನಾಡ ಬನಶಂಕರೀ॥

ಕನ್ನಡ ಎನ್ನುವುದು ಜೀವನದಿ **ರಾಗ: ಶುದ್ಧಧನ್ಯಾಸಿ**

ಕನ್ನಡ ಎನ್ನುವುದು ಜೀವನದಿ। ಗಿರಿವನ ಸಂಪದ ಎರಡು ಬದಿ।।ಪ।। ಪಂಪ ಮಹಾಬಲ ಜೋಡಿ। ಶಿಖರಗಳು ರನ್ನನ ಉನ್ನತ ಧವಳಗಿರಿ। ಶಿವಶರಣರ ವಿಸ್ತಾರದ ಬಯಲು। ಧುಮ್ಮಿಕ್ಕುವ ಹರಿಹರನ ಝರಿ।।1।। ಸುಳಿಮಿಂಚಿನ ಸೆಳೆ ಮುಂಗಾರಿನ ಮಳೆ। ಕುಮಾರವ್ಯಾಸನಿ ರಸಧಾರೆ। ಎದೆಯಗಲಕು ಕೆಂದಾವರೆ ಅರಳಿದ ಕವಿವರ ರತ್ನಾಕರನ ಕರೆ।।2।। ಸಹ್ಯಾದ್ರಿಯ ಮೇಲೆ ಧಾರಾಪುರಿ ಹೊಳೆ ಕಡಲ ತಡಿಯ ಘನ ವಿಸ್ತಾರ। ಮಲೆ ಘಟ್ಟದ ತುದಿಗಡಲಿನ ಅಬ್ಬರ ಮೈಸೂರಿನ ಮಲ್ಲಿಗೆ ಹಾರ।।3।।

ಕನ್ನಡದ ಕುಲದೇವಿ ಕಾಪಾಡು **ರಾಗ: ಮೋಹನಕಲ್ಯಾಣಿ-ಝಂಪೆತಾಳ**

ಕನ್ನಡದ ಕುಲದೇವಿ ಕಾಪಾಡು ಬಾತಾಯೆ ಮುನ್ನಡೆವ ಕನ್ನಡದ ದಾರಿದೀವಿಗೆ ನೀನೆ।।ಪ।। ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ ಕಾಮಕ್ರೋಧವನಳಿಸಿ ಕಾಪಾಡು ಬಾ ತಾಯೆ। ಒಂದಾದ ದೇಶದೊಳು ಹೊಂದಿಬಾಳುವ ಸುತರ ಹೊಸ ಬೆಸುಗೆಯಲಿ ಬಿಗಿದು ಒಂದುಗೂಡಿಸುತಾಯೆ।।1।। ಯಾವೆಣ್ಣೆಯಾದರೂ ಬೆಳಗುವುದೆ ಗುರಿ ಎಂಬ ತತ್ವವನು ನೀನೆತ್ತಿ ತೋರು ಬಾ ತಾಯೆ। ಎದೆಯಾಂತರಾಳದಲಿ ಪುಟಿವ ಕಾರಂಜಿಯಲಿ ಒಂದಾಗಿ ಕೂಗಲಿ ಕನ್ನಡಾ। ಕನ್ನಡಾ।।2।।

ಕನ್ನಡದ ಕುಲಕೋಟಿ ಕೇಳರಿಯಬೇಕಾದ **ರಾಗ: ಶುಭಪಂತುವರಾಳಿ**

ಕನ್ನಡದ ಕುಲಕೋಟಿ ಕೇಳರಿಯಬೇಕಾದ ಕಥೆಯಾದ ಸತ್ಯವಿದು ಕೇಳಿರಣ್ಣಾ। ಕನ್ನಡದ ಬಿಸಿರಕುತ ಬಿಸಿಯಾಗಿ ಉಳಿಯಲಿಕೆ। ಕೇಳಲೇ ಬೇಕಾದ ಕಥೆ ಇದಣ್ಣಾ। ಕನ್ನಡದ ಕೆಚ್ಚೆದೆಯು ಕೆಚ್ಚಾಗಿ ಕಳೆಗಟ್ಟಿ। ಕಡುಗಲಿಗಳಾಗಿರಲು ತಿಳಿವ ಕಥೆಯಣ್ಣಾ। ಕನ್ನಡದ ಸೂರ್ಯಪ್ರಭೆ ನಿತ್ಯನೂತನವಾಗಿ। ಬೆಳಗಲಿಕೆ ಬೇಕಾದ ಕಥೆ ಕೇಳಿರಣ್ಣಾ।। ಕೇಳಿರಣ್ಣ ಕಥೆಯಾ ಮುಂದೆ ಕೇಳಿರಣ್ಣ ಕಥೆಯಾ।। ಪರಮ ಪೂಜ್ಯ ಗುರು ವಿದ್ಯಾರಣ್ಯರ ತಪೋಬಲದಿ ತಾ ಕಳೆಗಟ್ಟಿ। ಹಕ್ಕಬುಕ್ಕರಧೈರ್ಯಸಾಹಸದ ಜಲವು ಉಮ್ಮಳಿಸಿ ಗುರಿಮುಟ್ಟಿ। ಸಾವಿರದ ಮೂರುನೂರಾ ಮೂವತ್ತಾರರಲಿ ವಿಜಯ ನಗರ ರಾಜ್ಯವು ಹುಟ್ಟಿ। ಕನ್ನಡ ರಾಜ್ಯವು ಕಣ್ಣು ತೆರೆದು ತಾ ಎದ್ದು ನಿಂತಿತು ಎದೆ ತಟ್ಟಿ।।1।। ತುಂಗಭದ್ರೆಯ ತೀರದಲ್ಲಿ ಭವ್ಯ ವಿಜಯನಗರವೆಂಬಾ ಶಹರ। ಏಳು ಸುತ್ತಿನ ಗೋಡೆಗಳಿಂದ ನಿರ್ಮಿಸಿ ನಿಲ್ಲಿಸಿದಾ ಪಹರ। ಮಲಪ್ರಭೆಯ ಉತ್ತರದವರೆಗೆ ಆಡಳಿತ ಹರಿಹರನವರೆಗೆ। ವಿರೂಪಾಕ್ಷ ದೇವಮಂದಿರದ ನಿರ್ಮಾಣವಾಯ್ತು ಭರದಿಂದ। ಗೋ ಬ್ರಾಹ್ಮಣ ಪ್ರತಿಪಾಲಕ ಹಿಂದು ಧರ್ಮರಕ್ಷಕನು ಆ ಶೂರ।।2।। ಹಕ್ಕ ಭೂಪತಿ ಸಮಗ್ರದಕ್ಷಿಣ ಹಿಂದೂಸ್ಥಾನವನಾಳಿದನು। ರಾಜಾಧಿರಾಜ ಬಿರುದನು ಧರಿಸಿ ಇಮ್ಮಡಿ ಹರಿಹರ ಮೆರೆದಿಹನು। ಮ್ಲೇಚ್ಛರು ಗೋವೆಯ ಬಿಟ್ಟು ಓಡಿದರು ಕನ್ನಡಕೆ ಕೊಟ್ಟು। ತಿರುಚಿನಾಪಳ್ಳಿ ಧೂಳೆದ್ದು ಕನ್ನಡದ ಛತ್ರ ಮೇಲೆದ್ದು। ಸರ್ವಜಾತಿಮತ ಪಂಥಗಳೆಡೆಗೆ ಸಮತಾವಾದವ ಬೀರಿದರು।।3।। ಸಾಳುವಂಶ ನರಸಿಂಹರಾಯ ದೋರ್ದಂಡ ಪರಾಕ್ರಮಿ ಪ್ರಜಾಪ್ರಿಯ। ಆನೆಯಂಥ ಬಲಶಾಲಿ ಉದಾರಿ ಮಹಾಹರೀ ಕೃಷ್ಣದೇವರಾಯ। ದಕ್ಷಿಣ ಹಿಂದೂ ಸ್ಥಾನವಿಡೀ ರಾಯನ ಶ್ವೇತ ಛತ್ರದಡಿ।ಕಲ್ಲಾಯಿತು ದೇವರಿಗೆ ಗುಡಿ, ಮಣ್ಣಾಯಿತು ಭಕ್ತಿಯಲಿ ಹುಡಿ। ರಾಯನ ಹಿಂದೆ ಹಾದಿ ಹಿಡಿಯಿತು ವಿಜಯನಗರದಾ ವಿಜಯ।।4।। ಸಾವಿರದ ಐದುನೂರ ಅರವತ್ತೈದನೆ ವರುಷದಲ್ಲಿ ವಿಧಿ ಕುಣಿದಾಡಿ। ತಾಳಿಕೋಟೆಯ ಯುದ್ಧ ನೆಕ್ಕಿತು। ವಿಜಯನಗರವನು ಎಳೆದಾಡಿ। ಮುಂದಿದ್ದ ಹಂಪೆ। ಹಾಳಾಯ್ತು ಪೆನುಗೊಂಡ ಮುಂದೆ ಗತಿಯಾಯ್ತು।ತಿರುಮಲನು ಆಡಳಿತ ಹಿಡಿದ ಜಗರಾಯ ಹಂಚಿಕೆಯ ಹೂಡಿದ। ರಾಜ್ಯದಾಹದಲಿ ಕುತಂತ್ರಿಯಾದ ಜಗರಾಯನಿಗಿದಿರಾದ ಗಡಿ।।5।। ಧರ್ಮಕೆ ಎಂದಿಗು ಭಯವಿಲ್ಲ ಮೋಸಕೆ ಎಂದೂ ಬಲವಿಲ್ಲ। ಸತ್ಯದ ಸೂರ್ಯಗೆ ಸಾವಿಲ್ಲ ಸುಳ್ಳಿಗೆ ಎಂದೂ ಬಾಳಿಲ್ಲ। ನಾವೆಲ್ಲ ಕನ್ನಡಿಗರೊಂದು ಒಗ್ಗಟ್ಟು ಇರಲಿ ಎಂದೆಂದೂ। ಕನ್ನಡವೆ ನಮ್ಮ ಉಸಿರು ಬಾಳೋಣ ಆಗಿ ಬಲು ಹಸಿರು। ಕನ್ನಡಾಂಬೆ ಜೈ ವಿರೂಪಾಕ್ಷ ಜೈ

ಎನ್ನಿರಿ ಎನ್ನಿರಿ ನೀವೆಲ್ಲಾ। ಕೇಳಿಯಾಯ್ತು ಕಥೆಯಾ ನೀವು ಕೇಳಿಯಾಯ್ತು ಕಥೆಯಾ।। ಓ ಕನ್ನಡಿಗರೆ ಮರೆಯದಿರಿ ಕಥೆಯಾ ಮರೆತಿರಾದರೆ ನಿಮ್ಮ ಹೆತ್ತ ತಾಯಿಯ ಮರೆತಂತೆ ನಿಮ್ಮ ತಂದೆಯನು ನೀವು ಕೈಯಾರ ಕೊಂದಂತೆ।।

ಕನ್ನಡ ದೇವಿಯೆ ಕರುಣಿಸು — ರಾಗ: ಮೋಹನ-ಏಕತಾಳ

ಕನ್ನಡ ದೇವಿಯೆ ಕರುಣಿಸು ತಾಯೆ। ಉನ್ನತ ನೀತಿಯ ಬೋಧಿಸು ತಾಯೆ। ಕಿನ್ನರ ಬಾಲರು ನಮಿಪೆವು ತಾಯೆ। ಕನ್ನಡ ನಾಡಿನ ಕುವರರ ಕಾಯೆ।।ಪ।। ವಾಣಿಯು ನೀನು ಭಾರತಿ ನೀನು। ವೀಣಾಪಾಣಿಯು ಸರಸ್ವತಿ ನೀನು। ಅಜನ ರಾಣಿಯೆ ಅನುದಿನ ನಾವು। ಭಜಿಪೆವು ಭಕ್ತಿಲಿ ಕಾಯೆ ನೀನು।।1।। ಕನ್ನಡ ಮಾತೆಯೆ ನಮ್ಮಯ ಬೆಳಕು। ಕನ್ನಡ ನುಡಿಯೆ ನಮ್ಮಯ ವಾಣಿ। ಕನ್ನಡ ಕೀರುತಿ ಮುಂದಿದೆ ಮಾರ್ಗ। ಕನ್ನಡ ಗುಡಿಯದೆ ನಮ್ಮಯ ಸ್ವರ್ಗ।।2।।

ಕನ್ನಡ ಮಾತೆಯ ಕಂದಮ್ಮಗಳೇ

ಕನ್ನಡ ಮಾತೆಯ ಕಂದಮ್ಮಗಳೇ ಕಣ್ಣನು ತೆರೆದೇಳಿ। ಕನ್ನಡ ಸೇವೆಗೆ ಕಂಕಣ ಕಟ್ಟಿರಿ ಆಯಿತು ಕರೆಕೇಳಿ। ಕನ್ನಡ ನುಡಿ ಸವಿ ಕಾಣುತೆ ಎನ್ನಿರಿ ಕನ್ನಡ ಕಸ್ತೂರಿ। ಕನ್ನಡ ನಾಡಿನ ಹೊರಗಡೆ ಊದಿರಿ ಕನ್ನಡ ತುತ್ತೂರಿ।। ಕನ್ನಡ ಕಾವ್ಯದ ಮಾಲೆಯ ಗೌರವ ಹರಡಿರಿ ಎಲ್ಲೆಲ್ಲೂ। ಕನ್ನಡ ಕಲೆಗಳ ಖ್ಯಾತಿಯ ದೀವಿಗೆ ಬೆಳಗಿರಿ ಭುವಿಯಲ್ಲೂ। ಕನ್ನಡ ನೆಲದಭಿಮಾನವು ತುಂಬಲಿ ರಕುತದ ಕಣದಲ್ಲಿ। ಕನ್ನಡ ಮಮತೆಯೆ ಆಗಲಿ ನಾಡಿನ ಪ್ರಗತಿಗೆ ಅಡಿಗಲ್ಲೂ।। ಕನ್ನಡ ಮಕ್ಕಳು ಎಲ್ಲೇ ಇರಲಿ ನಾವೆಲ್ಲರು ಒಂದೇ। ಕನ್ನಡ ಹೃದಯವು ಸಹಿಸದು ಎಂದೂ ಕರ್ನಾಟಕನಿಂದೆ। ಕನ್ನಡ ಬಾವುಟವಿದು ಹಾರಲಿ ಮೇಲಕೆ ಅತಿವೈಭವದಿಂದೆ। ಕೇಳಲಿ ಜಯಘೋಷಣೆ ಕನ್ನಡಮಾತೆಗೆ ಜಯಜಯವೆಂದೆ।।

ಕನ್ನಡವನುಳಿದೆನೆಗೆ ಅನ್ಯ — ರಾಗ: ಮೋಹನಕಲ್ಯಾಣಿ-ಝಂಪೆತಾಳ

ಕನ್ನಡವನುಳಿದೆನೆಗೆ ಅನ್ಯ ಜೀವನವಿಲ್ಲ। ಕನ್ನಡವೆ ಎನ್ನುಸಿರು ಪೆತ್ತನ್ನ ತಾಯಿ। ಕನ್ನಡವೆ ಧನಧಾನ್ಯ ಕನ್ನಡವೆ ಮನೆಮಾನ್ಯ। ಕನ್ನಡವೆ ಎನಗಾಯ್ತು ಕಣ್ಣು ಕಿವಿಬಾಯಿ।।1।। ಕನ್ನಡದ ಸವಿಮಾತು ಮನ್ನಣೆಯ ಪಳಮಾತು। ಕನ್ನಡ ಸರಸ್ವತಿಯು ನವ ಕಲ್ಪಲತೆಯು। ಕನ್ನಡದ ವರಚರಿತೆ ವಿಮಲ ಗಂಗಾ ಸರಿತೆ। ಕನ್ನಡದ ಸಿರಿಪೆಂಪು ಎನಗೆ ನರುಗಂಪು।।2।। ಕನ್ನಡದ ಸನ್ಮಾನವೆನಗದುವೆ ವರಮಾನ। ಕನ್ನಡಿಗರ ಸ್ವತಂತ್ರವದೆ ಪರಮ ಮಂತ್ರ। ಕನ್ನಡದ ಕೀರ್ತಿಯೆನ್ನ ಚಿತ್ತದ ಸ್ಫೂರ್ತಿ। ಕನ್ನಡದ ಒಕ್ಕೂಟವೆನಗದು ಕಿರೀಟ।।3।। ಕನ್ನಡದ ಹೊಲಮಣ್ಣು ಎನಗೆ ನವನಿಧಿ ಹೊನ್ನು। ಕನ್ನಡದ ತಿಳಿಜಲವು ಸುಧೆಯ ಪಲ್ಲವಲವು। ಕನ್ನಡದ ಹೂಗಿಡವು ಎನ್ನೊಡಲಿಗದೆ ತೊಡವು। ಕನ್ನಡದ ಪಶುಪಕ್ಷಿ ಚೆಲುವಿಗದೆ ಸಾಕ್ಷಿ।।4।। ಕನ್ನಡಿಗರತಿಶಯವು ಭುವನೇಶ್ವರಿಯ ದಯವು। ಕನ್ನಡಿಗರಿಗೆ ಜಯವು ಕೃಷ್ಣನಾಶ್ರಯವು। ಕನ್ನಡದ ಜನಕುಲವು ಎನ್ನ ತೋಳಿಗೆ ಬಲವು। ಕನ್ನಡಾಂಬೆಯ ಮುಕ್ತಿ ರಾಮನತಿ ಶಕ್ತಿ।।5।।

ಕನ್ನಡಕೆ ಹೋರಾಡು ಕನ್ನಡದ — ರಾಗ: ಹಿಂದೋಳ

ಕನ್ನಡಕೆ ಹೋರಾಡು ಕನ್ನಡದ ಕಂದ। ಕನ್ನಡವ ಕಾಪಾಡು ನನ್ನ ಆನಂದ। ಜೋಗುಳದ ಹರಕೆಯಿದು ಮರೆಯದಿರು ಚಿನ್ನ। ಮರೆತೆಯಾದರೆ ಅಯ್ಯೋ ಮರೆತಂತೆ ನನ್ನ।।1।। ರನ್ನ ಪಂಪರನಚ್ಚು ಕನ್ನಡದ ಸೊಲ್ಲು। ಬಸವ ದೇವನ ಮೆಚ್ಚು ಹರಿಹರನ ಗೆಲ್ಲು। ನಾರಣಪ್ಪನ ಕೆಚ್ಚು ಬತ್ತಳಿಕೆ ಬಿಲ್ಲು। ಕನ್ನಡವ ಕೊಲುವ ಮುನ್ ಓ ನನ್ನ ಕೊಲ್ಲು।।2।। ನೆವವು ಏನಾದರೇನ್ ಹೊರನುಡಿಯು ಹೊರೆಯೈ। ನಿನ್ನ ನಾಡೊಡೆಯ ನೀನ್ ವೈರಿಯನು ತೊರೆಯೈ। ಕನ್ನಡದ ನಾಡಿನಲಿ ಕನ್ನಡವ ಮೆರೆಸೈ। ತಾಯ್ಗಾಗಿ ಹೋರಾಡಿ ತಾಯ್ನುಡಿಯ ಪೊರೆಯೈ।।3।। ದಮ್ಮಯ್ಯ ಕಂದಯ್ಯ ಬೇಡುವೆನು ನಿನ್ನ. ಕನ್ನಡಮ್ಮನ ಹರಕೆ ಮರೆಯದಿರು ಚಿನ್ನ।ಮರೆತೆಯಾದರೆ ಅಯ್ಯೋ ಮರೆತಂತೆ ನನ್ನ। ಹೋರಾಡು ಕನ್ನಡಕ್ಕೆ ಕಲಿಯಾಗಿ ರನ್ನ।।4।।

ಕನ್ನಡ ನಾಡಿನ ಮಂಗಳ **ರಾಗ: ಖರಹರಪ್ರಿಯ**

ಕನ್ನಡ ನಾಡಿನ ಮಂಗಳ ಚಂದಿರ ತುಂಬಿ ಬೆಳಗಿ ಬರಲಿ। ಹೊನ್ನಿನ ಬೀಡಿನ ಅಂಗಳದೊಳು ಬೆಳದಿಂಗಳು ಚಿರವಿರಲಿ।।ಪ।। ತುಂಗೆಭದ್ರೆ ಕಾವೇರಿ ಮಾತೆಯರು ತುಂಬಿ ಹರಿಯುತಿರಲಿ। ಹೊಂಗೆ ತಂಗದಿರ ಸೊಂಪಿನೆಲೆ ನೆರಳಿನಿಂಪಿನಲೆಗಳಿರಲಿ।।ಅ.ಪ।। ಧೀರಮೇರು ಸಹ್ಯಾದ್ರಿ ಶ್ರೇಣಿ ಧವಳಾರ ಮುಗುಳ ಸಾಲೆ। ಧಾರೆಧಾರೆ ಝರಿ ಹೊರಳಿ ಉರುಳುತಿದೆ ಹವಳ ಮಣಿಯ ಮಾಲೆ। ಗಗನದಂಗಳದಿ ಉಯ್ಯಾಲೆಯಾಡುತಿದೆ ಗಂಧ ಹೊನ್ನೆ, ಜಾಲ। ಆ ಗೇರುಸೊಪ್ಪೆಯ ಬೆಳ್ಳಿಬೆಳಕ ಜಲಪಾತ ಜೀವಮೂಲ।।1।। ಹಸಿರು ಬೆಳೆಯಾ ತೆರೆತೆರೆಗಳೊಂದಿಗೆ ನೆಲದ ಮಕ್ಕಳಾಟ। ಕಾರನಾಡಿನಾ ಮಲೆಯಬೀಡು ಮನಸೆಳೆವ ಕಣ್ಣನೋಟ।। ಹಳೆಯಬೀಡು ಬೇಲೂರು ಬಾಲೆಯರ ಶಿಲ್ಪಕಲೆಯ ತವರು। ಬಳ್ಳಿ ಬೆಳೆದ ಬಿಳಿಕಲ್ಲಿನೆಳೆಪಿನೆಳೆಯ ಬಾಹುಬಲಿಯ ತಿರೆಯೆ।।2।। ದೇವ ಪಂಪ ರನ್ನಾದಿ ಕವಿಗಳ ಕಾವ್ಯಕಲ್ಪನಾಕ। ದಿವ್ಯ ತಾರೆಗಳ ಹಾಲುದಾರಿಯ ಚಿರಂಜೀವಿಲೋಕ। ಜೀವ ಜೀವನಕೆ ನಾಡ ಪರಂಪರೆ ಇಹಪರಗತಿ ನೌಕಾ। ದೇವಿಗಿರಲಿ ಭುವನೇಶ್ವರಿಗೆ ಸಿರಿಯಮೃತಧಾರೆ ಜಳಕ।।3।।

ಕನ್ನಡನಾಡಿನ ಕಂದನೆ **ರಾಗ: ಚಾರುಕೇಶಿ**

ಕನ್ನಡನಾಡಿನ ಕಂದನೆ ನೀನು ಕನ್ನಡ ನಾಡನು ಕಂಡಿಹೆ ಏನು? ಚೆಲುವಿನ ನಾಡು ಕನ್ನಡನಾಡು ಗೆಲುವಿನ ಬೀಡಿದು ಕನ್ನಡವು।।ಪ।। ಸೃಷ್ಟಿಯ ಚೆಲುವಿಕೆ ಚೆಲ್ಲುವುದಿಲ್ಲಿ ಕಲ್ಲಿನ ಕಬ್ಬಗಳೆಸೆವುವು ಇಲ್ಲಿ। ದೇಗುಲ ಮಂದಿರ ಹೂದೋಟ ನೂರಾರಿದೆ ಸುಂದರ ನೋಟ।।1।। ಬಿಜಾಪುರದಲಿ ಗೋಲಗುಮ್ಮಟವು ಬಾದಾಮಿಯಲ್ಲಿದೆ ಗವಿದೇಗುಲವು। ಐಹೊಳೆ ಸ್ಮರಣೆಗೆ ಬರಲಿ ಹಂಪೆಯ ಹಿರಿಮೆಯು ನೆನಪಿರಲಿ।।2।। ಬೇಲೂರೊಳು ಶಿಲೆ ನಲಿಯುತಲಿಹುದು ಹಳೇಬೀಡಿನ ಕಲೆ ಕರೆಯುತಲಿಹುದು। ಶ್ರವಣಬೆಳಗೊಳದ ಗೊಮ್ಮಟವು ನೋಡದೋ ನಗುತಲಿ ನಿಂತಿಹುದು।।3।। ಜೋಗದ ತಡಸಲು ದರ್ಶನ ಮಾಡು ಮಲೆನಾಡಿನ ಸೌಂದರ್ಯವ ನೋಡು। ಉಡುಪಿ ಬಿದಿರೆಗಳ ಮರೆಯದಿರು ಕೊಡಗಿನ ಬೆಡಗನು ತೊರೆಯದಿರು।।4।। ಅಲ್ಲಿಹುದು ಮೈಸೂರರಮನೆಯು ತಲೆಎತ್ತಿದ ಚಾಮುಂಡಿಯ ಗಿರಿಯು। ಬೃಂದಾವನ ನಗುತಿಹುದಿಲ್ಲಿ ಶ್ರೀರಂಗನು ಹರಸುವನಿಲ್ಲಿ।।5।। ಬೆಂಗಳೂರಿನ ಕಡೆ ನೀ ಸಾಗು ವಿಧಾನಸೌಧದ ಹಿರಿಮೆಗೆ ತಲೆಬಾಗು। ಕಬ್ಬನ್‌ಪಾರ್ಕ್‌ನ್ನು ಕಂಡುಬಿಡು ಲಾಲ್‌ಬಾಗ್ ನೋಡಿಯೇ ಬಂದುಬಿಡು।।6।।

ಕನ್ನಡದ ಕವನ ಹಾಡುವೆ **ರಾಗ: ಸಿಂಧುಭೈರವಿ**

ಕನ್ನಡದ ಕವನ ಹಾಡುವೆ ಈದಿನ। ಚಿನ್ನಿನ ಹೊನ್ನಿನ ಕನ್ನಡದ ಕವನ।।ಪ।। ರನ್ನನ ಸಿರಿನುಡಿ ಶ್ರೀಗಂಧ ಶಿವನುಡಿ ಕನ್ನಡದ ನಾಡು। ಮುತ್ತಿನ ಸಿಹಿನುಡಿ ಎಲ್ಲರ ಸವಿನುಡಿ ಕನ್ನಡದ ಹಾಡು।।1।। ಚರಿತ್ರೆ ಮುನ್ನುಡಿ ಶಿಲ್ಪದ ಕನ್ನಡಿ ಕನ್ನಡದ ನಾಡು। ರಾಘವನಾ ನುಡಿ ರನ್ನನ ಹೊನ್ನುಡಿ ಕನ್ನಡದ ಹಾಡು।।2।। ತುಂಗೆಯ ನಡೆನುಡಿ ಕಾವೇರಿ ನಡೆನುಡಿ ಕನ್ನಡದ ನಾಡು। ಇಂಪಿನ ತಿಳಿನುಡಿ ತಂಪಿನ ಹಿತನುಡಿ ಕನ್ನಡದ ಹಾಡು।।3।।

ಕನ್ನಡಿಗರು ಕಂಗೊಳಿಸಿದ **ರಾಗ: ಶುದ್ಧ ಧನ್ಯಾಸಿ**

ಕನ್ನಡಿಗರು ಕಂಗೊಳಿಸಿದ ಕನ್ನಡನಾಡಿದು। ಕನ್ನಡ ಕಿಂಪುರುಷರ ನಮ್ಮ ತಾಯ್‌ನಾಡಿದು।। ರಾಘವ ಕುಮಾರವ್ಯಾಸ ರನ್ನ ಪಂಪ ಹರಿಹರ। ಜನಿಸಿದ ನಲ್ಮೆಯ ತಾಯ್‌ಕನ್ನಡ ಬೀಡಿದು।। ಕುವೆಂಪು ಕಾವ್ಯಾನಂದರ ಕವಿ ಚೇತನವಿದು। ಅಂಬಿಕಾತನಯದತ್ತ ಅವತರಿಸಿದ ನಾಡಿದು।। ನಮೋ ತಾಯಿ ಭುವನೇಶ್ವರಿ ನಮೋ ನಮೋ ಭಗವತಿ। ಕನ್ನಡಿಗರ ಪ್ರೇಮದೊಡತಿ ನಮೋನಮೋ ಕನ್ನಡತಿ।।

ಕನ್ನಡಿಗ ಓ ಕನ್ನಡಿಗ **ರಾಗ: ಶುದ್ಧ ಧನ್ಯಾಸಿ**

ಕನ್ನಡಿಗ ಓ ಕನ್ನಡಿಗ ನೀ ಮೆಟ್ಟುವ ನೆಲ, ನೀ ಕುಡಿಯುವ ಜಲ ನೀ ಬದುಕುವ ನೆಲ ಕರುನಾಡು। ಎಂಬುವ ಸತ್ಯವ ನೀ

ತಿಳಿಯೋ। ಎನ್ನದು ನಾಡೆಂದು ಕುಣಿದಾಡೊ। ನಲಿದಾಡೊ.... ಕನ್ನಡಿಗ ಓ ಕನ್ನಡಿಗ।। ಯದುಕುಲ ರಾಜರು ವೈಭವದಿ ಮೆರೆದ ಹಂಪೆಯ ಪೆಂಪನು ನೀ ನೋಡು। ಹೊನ್ನಿನ ಮಳೆಗರೆದಿರುವ ಧೂಳಲಿ ವಿರೂಪಾಕ್ಷನ ನೆಲೆ ನೋಡು, ।।1।। ತುಂಗಭದ್ರೆ ಕಾವೇರಿ ಗೋದೆಯರು ಸಂಗಮಿಪರು ಈ ನೆಲದಲ್ಲಿ ಕಣ್ಮನ ತಣಿಸುವ ಜೋಗದ ಐಸಿರಿ। ತಂಪೆರುವುದು ಕರುನಾಡಿನಲಿ ।।2।। ಪಂಪ ರನ್ನ ಜನ್ನ ಕುಮಾರವ್ಯಾಸರು ಸರ್ವಜ್ಞ ಬಸವರು ಹಾಡಿಹರು। ಸಂಗೀತ ಸಾಹಿತ್ಯ ನೃತ್ಯ ಶಿಲ್ಪಕೆ ಕನ್ನಡ ನಾಡೆ ತವರೂರು ।।3।।

ಕನ್ನಡ ಎನೆ ಕುಣಿದಾಡುವುದೆನ್ನೆದೆ ರಾಗ: ಮಾಂಡ್

ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು।। ಕಾಮನ ಬಿಲ್ಲನು ಕಾಣುವ ಕವಿಯೊಲು। ತೆಕ್ಕನೆ ಮನ ಮೈ ಮರೆಯುವುದು। ಕನ್ನಡ.. ಕನ್ನಡ-ಹಾ ಸವಿ ಕನ್ನಡ ಆ....।।1।। ಕನ್ನಡದಲಿ ಹರಿ ಬರೆಯುವನು। ಕನ್ನಡದಲಿ ಹರ ತಿರಿಯುವನು। ಕನ್ನಡದಲ್ಲಿಯೇ ಬಿನ್ನಹಗೈದೊಡೆ। ಹರಿ ವರಗಳ ಮಳೆ ಕರೆಯುವನು। ಕನ್ನಡ ಕನ್ನಡ ಹಾ ಸವಿ ಕನ್ನಡ ಆ.....।।2।। ಬಾಳುವುದೇತಕೆ ನುಡಿಯಲೆ ಜೀವ। ತಿಳಿಗನ್ನಡದಲಿ ಕವಿತೆಯ ಹಾಡೆ। ಸಿರಿಗನ್ನಡದೇಳಿಗೆಯನು ನೋಡೆ। ಕನ್ನಡತಾಯಿಯ ಸೇವೆಯ ಮಾಡೆ। ಕನ್ನಡ ಕನ್ನಡ ಹಾ ಸವಿ ಕನ್ನಡ ಆ....।।3।।

ಕನ್ನಡದ ನಾಡು ಚೆಂದ ರಾಗ: ಮೋಹನ

ಕನ್ನಡದ ನಾಡು ಚೆಂದ ಕನ್ನಡದ ಬೀಡು ಚೆಂದ। ಕನ್ನಡದ ಜಲಚೆಂದ ನಮ್ಮ ಕನ್ನಡದ ಹಾಡುಚೆಂದ। ನಮ್ಮ ಕನ್ನಡದ ನೆಲಚೆಂದ।।ಪ।। ಮಲ್ಲಿಗೆ ಹೂವ ನೋಡ- ಮೈಸೂರ ನಾಡ ನೋಡ। ಮೈಸೂರ ನಾಡ ಸಿರಿ ನೋಡ।।1।। ಗುಲಾಬಿ ಹೂವನೋಡ ಗುಲ್ಬರ್ಗ ನಾಡ ನೋಡ। ಗುಲ್ಬರ್ಗ ನಾಡ ಸೋಬಗ ನೋಡ।।2।। ಕನಕಾಂಬ್ರಿ ಹೂವ ನೋಡ ಕನ್ನಂಬಾಡಿ ಕಟ್ಟೆ ನೋಡ ಕನ್ನಂಬಾಡಿ ಕಟ್ಟೆಯ ದೀಪನೋಡ।।3।। ಕಮಲಾದ ಹೂವ ನೋಡ ಕೊಡಗೀನ ನಾಡ ನೋಡ ಕೊಡಗಿನ ನಾಡ ಬೆಡಗ ನೋಡ।।4।। ಚೆಂಡಿನ ಹೂವ ನೋಡ ಚೆನ್ನಪಟ್ಟಣ ನೋಡ। ಚೆನ್ನಪಟ್ಟಣದ ಬೊಂಬೆ ನೋಡ।।5।।

ಕನ್ನಡದ ರವಿ ಮೂಡಿ ಬಂದಾ ರಾಗ: ಮೋಹನ

ಕನ್ನಡದ ರವಿ ಮೂಡಿ ಬಂದಾ ಮುನ್ನಡೆವ ಬೆಳಕನ್ನೆ ತಂದ ರಾಜ್ಯೋತ್ಸವ ನಮ್ಮ ರಾಜ್ಯೋತ್ಸವ।। ನಮ್ಮ ನಾಡ ಹಿರಿಯರ ಪೌರುಷದ ತ್ಯಾಗದಿಂದ ಕೀರ್ತಿ ಶಿಖರ ಮುಟ್ಟಿತು ಕನ್ನಡಿಗರ ಸಂತಸ।। ಚಿಕ್ಕಚಿಕ್ಕ ಭಾಗವಾಗಿ ಚದುರಿದ್ದ ನಾಡಿದು। ಒಂದಾಗಿ ಕೂಡಿತು ಕರ್ನಾಟಕವಾಯಿತು।।1।। ವೀರರೆಲ್ಲ ಧೀರಗೀತೆ ಹಾಡಿದಂಥ ನಾಡಿದು। ಸಿರಿತನದ ಅರಸರು ಮೆರೆದಂಥ ನಾಡಿದು। ಶ್ರೀಗಂಧ ಸೌಗಂಧ ತುಂಬಿರುವ ಬೀಡಿದು। ಶಿಲ್ಪಕಲೆಯ ಜೀವಂತ ಸ್ವರ್ಗವಾದ ನಾಡಿದು।।2।। ನಾಟ್ಯರಾಣಿ ಶಾಂತಲೆಯ ಕೀರ್ತಿತಂದ ಕನ್ನಡ ವೀರರಾಣಿ ಚೆನ್ನಮ್ಮನ ನೆನಪು ಕೊಡುವ ಕನ್ನಡ। ರನ್ನ ಪಂಪ ಕವಿಗಳ ಭವ್ಯಕಾವ್ಯ ಕನ್ನಡ ಜೀವನದಿ ನಲಿಯುತಿಹ ಪುಣ್ಯಭೂಮಿ ಕನ್ನಡ।।3।।

ಕನ್ನಡ ತಾಯಿಗೆ ಮಣಿವಾ ರಾಗ: ಬೇಹಾಗ್-ಖಂಡಛಾಪುತಾಳ

ಕನ್ನಡ ತಾಯಿಗೆ ಮಣಿವಾ ನಾವ್ ಕನ್ನಡಿಗರೆಂದು ಕುಣಿವಾ।।ಪ।। ಭಾರತೀಯ ಸ್ವಾತಂತ್ರ್ಯ ಭಾಗ್ಯದೊಳಪಾರ ಬಳುವಳಿಯ ಹೊಂದಿ ನಲಿಯುತಿಹ।।ಅ.ಪ।। ಗಿರಿಪಂಕ್ತಿ ತವರ ಸುಂದರವನವೊ। ತರುರಾಜಿ ತವರ ಚೆಲು ಚಂದನವೊ। ಪರಿಮಳ ಪೊತ್ತಿಹ-ಪಡುವ ಪವನವೊ। ನೆರ ಕಣ್ ಮನಗಳಿಗಿವು ಔತಣವೊ।।1।। ಶಿಲೆಯೆಲ್ಲ ಕಲೆಯೆ ಈ ನಾಡಿನಲಿ। ಕಲೆಯೆಲ್ಲ ಚೆಲುವೆ ಹೊನ್ನಾಡಿನಲಿ। ಚೆಲುವೇ ಒಲವಿನಾ ನಡೆಯಲಿ ನುಡಿಯಲಿ। ಒಲವೆ ಮಂತ್ರವೀ ಧರ್ಮದ ಗುಡಿಯಲಿ।।2।। ಕಲೆಯ ಚೆಲುವ ಎದೆಯೊಲವ ನೀಡುತ। ಚಲವನುಳಿದು ಸೋದರರ ಕೂಡುವ। ಬಲವಗಳಿಸಿ ತಾಯನು ಕಾಪಾಡುತ। ಗೆಲವು ಮಂಗಳವನಿಳೆಗೆ ಪಾಡುತ।।3।।

ಕನ್ನಡ2 ಕನ್ನಡವೆಂದುಲಿ ರಾಗ: ಮೋಹನ

ಕನ್ನಡ ಕನ್ನಡ ಕನ್ನಡವೆಂದುಲಿ ಕನ್ನಡ ನಾಡಿನ ಓ ಕಂದ। ಕನ್ನಡ ಭಾಷೆಯ ಕೀರುತಿ ಹಬ್ಬಿಸು ಕನ್ನಡ ತಾಯಿಗೆ ಆನಂದ॥ಪ॥ ಕಾರ್ಕಳ ಬೆಳಗೊಳ ಐಹೊಳೆ ಹರಿಹರ। ಹಂಪೆ ಹಳೇಬೀಡು ಬೇಲೂರು। ಶಿಲೆಯಲಿ ಜೀವನ ಕಲೆಗಳ ಬೆಳಗುವ। ಶಿಲ್ಪಕಲೆಗಳ ತವರೂರು॥1॥ ತುಂಗಭದ್ರೆ ಕಾವೇರಿ। ಶರಾವತಿ ಕೃಷ್ಣ ಕಾಳಿವರ ವೇದೆಯರು ಜಲವನು ಹರಿಯಿಸಿ ಬೆಳೆಯನು ಬೆಳೆಯಿಸಿ। ಸಲಹುವ ನದಿಗಳ ನೆಲೆವೀಡು॥2॥ ರನ್ನ ಜನ್ನ ವರಪಂಪ। ಲಕುಮೀಶ ರಾಘವ ಹರಿಹರ ಮುದ್ದಣರು। ಕನ್ನಡ ಸಾಹಿತ್ಯ ಕಲೆಯನು ಬೆಳೆಸಿದ। ಕನ್ನಡ ಕವಿಗಳ ತವರೂರು॥3॥ ರಾಣಿಚೆನ್ನಮ್ಮ ಸಂಚಿ ಹೊನ್ನಮ್ಮ। ಉಡುತಡಿ ಊರಿನ ಅಕ್ಕಮ್ಮ। ಕನ್ನಡ ನಾಡಿಗೆ ಕೀರುತಿ ತಂದಿಹ। ವೀರ ರಮಣಿಯರ ಕರುನಾಡು॥4॥

ಕನ್ನಡ ನಾಡಿನ ಬಾವುಟ — ರಾಗ: ಮಧ್ಯಮಾವತಿ

ಕನ್ನಡ ನಾಡಿನ ಬಾವುಟ ಹಾರಿಸಿ, ಕನ್ನಡ ಮಾತೆಯ ಬಿರುದನು ಬಾರಿಸಿ। ಕನ್ನಡ ಕನ್ನಡ ಜಯ ಜಯವೆನ್ನುತ। ಕನ್ನಡಿಗರು ಮುನ್ನಡೆವುದು ಸಂತತ॥ ಉನ್ನತ ಪರ್ವತ ಮಾಲೆಯ ಬೆಡಗನು ಸನ್ನುತ ಪರಿಮಳ ಗಂಧದ ಸೊಬಗನು। ಚಿನ್ನದ ಗಣಿಯನು ಮೊರೆಯುವ ಕಡಲನು, ಕನ್ನಡ ನಾಡಿನೊಳಲೆಯುತ ಕಂಡೆನು॥1॥ ಗಂಗ ಕದಂಬ ಚಾಲುಕ್ಯರಲೂಪರು, ಸಂಗರಕಲಿಗಳು ರಟ್ಟ ವಿಕ್ರಮರು। ಹಿಂಗದ ವಿಜಯನಗರದಧಿರಾಜರು ಸಂಗಡ ಕಳಚೂರ್ಯರು ಧರೆಯಾಳ್ದರು॥ ವಿದ್ಯಾರಣ್ಯರು, ಮಾಧ್ವವರೇಣ್ಯರು ಸಿದ್ಧಪಡೆದರೀ ನಾಡಿನೊಳೆಲ್ಲರು। ಶುದ್ಧರು, ಭಕ್ತಿ ಪ್ರಸಿದ್ಧರು ನಾಡಿನೊಳಿದ್ದರು ಕನಕಪುರಂದರ ಬಸವರು॥2॥ ಪಂಪರನ್ನರದೊ ವೀರಗಾನದಲಿ ಹೊನ್ನಮ್ಮನು ಕಂತಿಯು ಹೊಂಗೊರಳಲಿ। ಚೆನ್ನಾಯ್ತೆನ್ನಲು ಹಾಡ ಹಾಡಿದರು ಕನ್ನಡ ಸವಿ ನುಡಿಯೆಂದು ಸಾರಿದರು॥ ದಸರೆಯ ದೀಪಾವಳಿಗಳ ಕಾಲದಿ ಎಸೆವುದು ನೆಲವಿದು ಸುಖ ಸಮ್ಮೇಳದಿ। ಪಸರಿಸುತಿರುವುದು ಕನ್ನಡ ಪ್ರೀತಿಯು ದೆಸೆ ದೆಸೆ ತುಂಬಿದೆ ಕನ್ನಡ ಕೀರ್ತಿಯು॥3॥

ಕಸ್ತೂರಿ ಕನ್ನಡದ ನಾಡು — ರಾಗ: ಅಭೇರಿ

ಕಸ್ತೂರಿ ಕನ್ನಡದ ನಾಡು ಇದು ಶ್ರೀಗಂಧದಾ ನೆಲೆವೀಡು॥ಪ॥ ಹಸಿರುಟ್ಟು ನಲಿದಾಡುವ ಮಲೆನಾಡ ತಾಯಿ ಅದನೋಡಿ ನಗುತಿರುವ ಸುಮಗಳ ರಾಣಿ। ವಸಂತ ಮಾಸದಲಿ ಕೋಗಿಲೆಯ ಗಾನ। ಸುಂಯ್ ಎನ್ನುತ ಮನತಣಿಸುವ ತಂಗಾಳಿಯ ತಾಣ॥1॥ ಸರಸರನೆ ಹರಿಯುವ ಕಾವೇರಿ ತಾಯಿ। ಮುಗಿಲಿಂದ ಧರೆಗಿಳಿವ ಜೋಗದ ಹಾಯಿ। ಆಕಾಶದಿ ಬೆಳ್ಳಕ್ಕಿಯ ಸಾಲುಗಳ ನೋಟ। ಸುಮದಲ್ಲಿನ ಸವಿಹೀರುವ ಭ್ರಮರಂಗಳ ಆಟ॥2॥ ಶಿಲೆಯಲ್ಲಿ ಕಲೆಯಿರುವ ಬೇಲೂರು ಹಳೆಬೀಡು। ಭುವಿಯೆಲ್ಲಕೆ ಸೊಬಗೀಯುವ ಗೊಮ್ಮಟನ ನೋಡು। ಭಾವೈಕ್ಯದಿ ನಾವೆಲ್ಲರು ನಲಿವಂತೆ ಮಾಡು। ಕರುನಾಡ ಸಿರಿದೇವಿಯ ನೆನೆನೆನೆದು ಹಾಡು॥3॥

ಕರುನಾಡ ದೇಶ ಕವಿಗಳ — ರಾಗ: ಶ್ರೀರಾಗ

ಕರುನಾಡ ದೇಶ ಕವಿಗಳ ವಾಸ। ಸೃಷ್ಟಿಯ ಸುಂದರ ಹಾಸ ಕರುನಾಡ ದೇಶ॥ಪ॥ ನೋಡಲ್ಲಿ ಕದಂಬರಾಪುರ ಬನವಾಸಿಯು। ಮೆರೆಯುತಲಿದೆ ಹಸಿರನು ಹಾಸಿ। ಆ ಹಾ ಆಹಾ। ಮೆರೆಯುತಲಿದೆ ಹಸಿರನು ಹಾಸಿ॥ ಕಾವೇರಿ ಗೋದಾ ತುಂಗಾನದಿಗಳು। ಹರಿಯುತಲಿವೆ ಸೊಗವನು ಸೂಸಿ। ಬೇಲೂರು ಜಕ್ಕಣ ಶಿಲೆಯಲಿ ಕೆತ್ತಿದ। ಹಳೇಬೀಡಿನ ಗುಡಿಯು। ಬೆಳುಗೊಳ ಜಿನ ಮೂರುತಿ ನಿಂತಿಹ। ಜನತಲೆ ಬಾಗುವೊಲು। ಆಹಾ ಆ.॥ ಶ್ರೀ ಪಂಪ ರನ್ನ ನೃಪತುಂಗ ಪೊನ್ನ। ಹರಿಹರ ಸರ್ವಜ್ಞ। ಕನ್ನಡದ ಕೀರ್ತಿ ಪತಾಕೆಯನ್ನು। ಆಗಸದೆತ್ತರ ಹಾರಿಸುತೆ। ನೀತಿಯ ಮಾರ್ಗವ ತೋರಿಸುತೆ॥

ಕರ್ನಾಟಕವು ನಮ್ಮ ನಾಡು — ರಾಗ: ಹಿಂದೋಳ

ಕರ್ನಾಟಕವು ನಮ್ಮ ನಾಡು। ಸುಂದರ ವನಗಳ ಬೀಡು। ಬಂಗಾರ ಗಣಿಗಳ ನಾಡು। ಕರ್ನಾಟಕವು ನಮ್ಮ ನಾಡು॥ಪ॥ ವಿಶ್ವವಿಖ್ಯಾತ ವಿಶ್ವೇಶ್ವರಯ್ಯ। ಬಸವಣ್ಣನವರು ಮೆರೆದಿಹರಯ್ಯ। ಹರಿಹರ ಪಂಪರನ್ನ ಜನ್ನ ಕವಿಗಳ ವಾಣಿ। ಈ ನಾಡು ಚೆನ್ನ ಸುಂದರ ವನಗಳ ಬೀಡು॥1॥ ರಾಜರಾಜರ ಮಹಾಮೈಸೂರು। ಬೃಂದಾವನದಿ ಹರಿವಾ ನೀರು। ಕಡಲತೀರದಿ

ಆ ಮಂಗಳೂರು। ಈ ಬೆಂಗಳೂರು ಸುಂದರವನಗಳ ಬೀಡು।।2।। ಕಿತ್ತಳೆ ಹಣ್ಣಿಗೆ ಈ ನಮ್ಮ ಕೊಡಗು। ಶಿಲ್ಪಕಲೆಗಳ ಬೇಲೂರು ಬೆಡಗು। ಮಲೆನಾಡು ಸಿರಿ ನೀನೇ ಪೊಗಳು। ಪುಣ್ಯಭೂಮಿಯ ಈ ನಮ್ಮ ನಾಡು।।3।।

ಕರುಣೆಯ ಬೆಳಗಿನ **ರಾಗ: ರೇವತಿ–ಏಕತಾಳ**

ಕರುಣೆಯ ಬೆಳಗಿನ ಕರುನಾಡು। ಪುಣ್ಯದ ಬೆಳಸಿನ ಸಿರಿನಾಡು।।ಪ।। ಮಂಗಲ ಚೇತನ ಕಂಡಿಹ ಕನಸಿನ ನನಸೇ ಕನ್ನಡ ಸಿರಿನಾಡು। ಕಣಕಣ ಚೆಲುವಿನ ಕಿಂಕಿಣಿ ಕುಣಿಯುವ ಸೊಗಸೇ ನಮ್ಮೀ ಕರುನಾಡು।।1।। ಕನ್ನಡ ಕಂಠದಿ ದಿನ ದಿನ ನೂತನ। ಇಂಚರ ಚಿಮ್ಮಿದೆ ವರ್ಣಮಯ। ಅಗಣಿತ ನುಡಿಮತ ಪಂಥದ ಒಡಲಲಿ ತುಳುಕಿದೆ ಒಂದೇ ರಾಗಲಯ। ಅನುರಾಗಲಯ।।2।। ಗಿರಿ ದರಿ ನದಿ ಝರಿ ಕಡಲಿನ ಕೊರಳಲಿ ಕೇಳುವ ವಾಣಿಯು ಒಂದೇ। ಆಜನ ಈಜನ ಸಕಲರ ಕೂಜನ ಭಾವತರಂಗವು ಒಂದೇ।।3।। ನಾಡಿನ ಮಣ್ಣಲಿ ಕ್ರಾಂತಿಯ ಬೀಜವ ಬಿತ್ತುತ ಬೆಳೆಯುತ ಸಾಗುವೆವು। ಆಗಸ ಪಥದಲಿ ಸಾಹಸ ಕ್ಷಿಪಣಿಯ ಹೊಸ ಇತಿಹಾಸವ ಬರೆಯುವೆವು।।4।।

ಜಯ ಕರ್ನಾಟಕ ಜಯ **ರಾಗ: ಚಾರುಕೇಶಿ**

ಜಯ ಕರ್ನಾಟಕ ಜಯ ಕರ್ನಾಟಕ ಜಯಕರ್ನಾಟಕ ಮಾತೆ।ಜಯಗೀತೆ ಹಾಡಿ ಸುತರೆಲ್ಲ ಕೂಡಿ ವಂದಿಪೆವೂ ಜನ್ಮದಾತೆ।। ಕೋಲಾರ ಚಿನ್ನ ಬೇಲೂರು ಚೆನ್ನ ಮೈಸೂರು ಗಂಧ ತಂದ। ಸಾಹಿತ್ಯ ಕಲೆಯ ಸಂಸ್ಕೃತಿಯ ನೆಲೆಯ ಆಗರವೂ ನಮ್ಮ ನೆಲವು। ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಕಿತ್ತೂರು ವೀರರಾಣಿ। ಕೆಚ್ಚೆದೆಯ ಕಲಿಯ ಮೈಸೂರು ಹುಲಿಯ ಹೆಮ್ಮೆಯದು ಎಮ್ಮ ನಿಲುವು(ಕುಲವು)।। ಲಕ್ಷ್ಮೀಶ ರನ್ನ, ನಾರ್ಣಪ್ಪ ಜನ್ನ ಮುದ್ದಣ್ಣ ಹರಿಹರ ಪಂಪ। ಹಿರಿಕವಿಗಳಿಂದ ವರಪಡೆದು ಬಂದ ಕನ್ನಡವು ನಮ್ಮ ನುಡಿಯು। ಶೃಂಗೇರಿ ಉಡುಪಿ ಗೋಕರ್ಣಕ್ಷೇತ್ರ ಕೊಲ್ಲೂರು ಧರ್ಮಸ್ಥಳವೂ। ನೂರಾರು ಜನರ ಕರಬೀಸಿ ಕರೆವ ದೇಗುಲವೂ ಎಮ್ಮ ಗುಡಿಯು।। ಆಗುಂಬೆ ಘಾಟಿಗೆ ಇನ್ನಿಲ್ಲ ಸಾಟಿ ಭಾಸ್ಕರನು ಪಡುವಣಂದ। ಹೊಂಬಣ್ಣ ತಳೆದು ಬಾನಂಚಲಿಳಿದು ಅಸ್ತಮಿಪ ದೃಶ್ಯ ಚೆಂದ। ಉತ್ತರದ ಸೀಮೆ ಅಂಗನೆಯಾ ಭೀಮೆ ದಕ್ಷಿಣದ ನಾರಿ ಕಾವೇರಿ। ಸುರಗಂಗೆ ತಂಗಿಯಂತಿರ್ಪ ತುಂಗೆ ಒಳನಾಡ ಮಂಗಳಾಂಗಿ।। ಕೇರಳದ ಚಿಣ್ಣ ನೆರೆ ಆಂಧ್ರದಣ್ಣ ತಮಿಳ್ನಾಡು ನಮ್ಮ ತಮ್ಮ। ಉತ್ತರದ ಮಿತ್ರ ಭಾರತದ ಪುತ್ರರೆಂದೆಣಿಪ ಬೆಂಗಳೂರು। ಏಲಕ್ಕಿ ಇಂಗು ಗೋಡಂಬಿ ತೆಂಗು ಕರಿಮೆಣಸು ಜಾಯಿಕಾಯಿ। ಹೊರನಾಡುಗಳಿಗೆ ಹಡಗಲ್ಲಿ ಕಳಿಪ ಬಂದರವೂ ಮಂಗಳೂರು।। ಮಂಗ್ಳೂರೆ ಚೆಂದ ಬೆಂಗ್ಳೂರೆ ಅಂದ ಮೈಸೂರು ಬೃಂದಾವನ। ಧಾರವಾಡ ಮಂಡ್ಯ ಶಿವಮೊಗ್ಗ ದುರ್ಗ ಗುಲ್ಬರ್ಗರಾಯಚೂರು। ಬಳ್ಳಾರಿ ಒಂದೊಂದು ಸೇರಿ ಉಳಿದೆಲ್ಲ ಜಿಲ್ಲೆ ಮತ್ತೆಲ್ಲಾ ಮುತ್ತಿನಂತೆ। ಹತ್ತಕ್ಕೆ ಹತ್ತು ಮತ್ತ್ಹತ್ತು ಸೇರಿ ಈ ನಾಡು ಜನಿಸಿತಂತೆ।।

ಜಯ ಜಯ ಜಯ ಕನ್ನಡ ರಾಜೇಶ್ವರಿ **ರಾಗ: ಬೃಂದಾವನಸಾರಂಗ**

ಜಯ ಜಯ ಜಯ ಕನ್ನಡ ರಾಜೇಶ್ವರಿ। ಶರಣು ಬಂದೆ ಪಾದಕೆ ಭುವನೇಶ್ವರಿ।।ಪ।। ಪಂಪನ ನುಡಿ ಮಿಂಚಿನ ಮಣಿ ಮಾಲೆಗೆ। ನಾರಣಪ್ಪ ಕಡೆದ ಭಾವ ಲೀಲೆಗೆ। ಶಿಲೆಯು ಅರಳಿ ನಗುವ ಕಲೆಯ ಬೀಡಿಗೆ। ಯಾರು ಸಮರೆ ತಾಯಿ ನಿನ್ನ ಚೆಲುವಿಗೆ।।1।। ಶಂಕರ ರಾಮಾನುಜರಲಿ ಸುಳಿಯುತ। ಮಧ್ವರ ನವ ಚಿಂತನದಲಿ ಬೆಳೆಯುತ। ಬಸವಣ್ಣನ ನೀತಿಗೆ ಅಲ್ಲಮಪ್ರಭು ಪ್ರೀತಿಗೆ। ನಮೋ ಎನುವೆ ದರ್ಶನಗಳ ಜ್ಯೋತಿಗೆ।।2।। ಕಾವೇರಿಯ ಸಿರಿ ಪೈರಿನ ಹಾಡಿಗೆ। ಮಿಂಚು ನಗೆಯ ಶರಾವತಿಯ ಬೀಡಿಗೆ। ವಿರೂಪಾಕ್ಷ ಚಾಮುಂಡಿಯ ಜೋಡಿಗೆ। ಮಣಿವೆ ನೂರು ವೈಭವಗಳ ನಾಡಿಗೆ।2ಸಾರಿ।।3।।

ಜಯ ಜಯ ಜಯ ಕನ್ನಡ ಮಾತೆ (ಕನ್ನಡರಾಜ್ಯೋತ್ಸವ)

(ಸರಿಗಾ ರಿಗಪಾ-ಗಪದಾ-ಪದಸಾ। ಸರಿಗಗ ರಿಗಪಪ । ಗಪದದ । ಪದಸಸ - ಪದಸರಿಗಾ - ಪದಸರಿಗಪಗಾ॥ ಲಲ್ಲಲಲ್ಲ ಲಲ್ಲ ಲಲಲ್ಲಾ.... ಆ... ಆ... ಆ... ಆ...॥ 2 ಸಾರಿ ॥ ಜಯ ಜಯ ಜಯ ಕನ್ನಡ ಮಾತೆ॥ ಜಯ ಶುಭ ಸೌಖ್ಯಪ್ರದಾತೆ। ಚಿರಶುಭವಾಗಲಿ ಕನ್ನಡ ಬಾಳ್ಗೆ.. ಶುಭ ಸಿರಿಗನ್ನಡಂಗೆಲ್ಗೆ... ಶುಭ ಸಿರಿ ಗನ್ನಡಂಗೆಲ್ಗೆ॥2ಸಾರಿ॥ ದಕ್ಷಿಣ ಗಂಗೆಯ ವರಸಿರಿನಾಡು। ಕನ್ನಡ ಕಲಿಗಳ ಹೊನ್ನಾಡು ಆ.. ಆ.. ಆ.. ॥2ಸಾರಿ॥ ಪಂಪರನ್ನರ ಮೆರುಗಿನ ಬೀಡು... ಪದಸರಿಗಾ॥2ಸಾರಿ॥ ನಾಡ ಸರಸ್ವತಿ ನೆಲೆವೀಡು॥2ಸಾರಿ॥ಜನ್ಮ ಭೂಮಿಯದು ಸ್ವರ್ಗಕು - ಮಿಗಿಲು ಕನ್ನಡ ನೆನೆದರೆ ಮನ ನವಿಲು ಆ.. ಆ..॥2ಸಾರಿ॥ ಉತ್ತುಂಗ ಗಿರಿಗಳ ಮುಕುಟದ ಮಾಲೆ ಪದಸರಿಗಾ...॥2ಸಾರಿ॥ ಅನನ್ಯ ತಾಯಿಯ ಲೀಲೆ॥4ಸಾರಿ॥ ಸಾಗಲಿ ವೈಭವ ರಾಜ್ಯೋತ್ಸವ। ನಿಜ ಅರ್ಥದಲಿ ನಿತ್ಯೋತ್ಸವ॥2ಸಾರಿ॥ ಜಯ ಜಯ ವೆನ್ನುವ ನಮ್ಮ ಜನರಿಗೆ ಶುಭಸಿರಿಗನ್ನಡಂಗೆಲ್ಗೆ... ಶುಭಸಿರಿ ಕನ್ನಡಂಗೆಲ್ಗೆ... ಶುಭ ಸಿರಿಗನ್ನಡಂ ಗೆಲ್ಗೆ....॥

ಜಯತು ಜಯ ಕನ್ನಡತಿ ರಾಗ: ಖಮಾಚ್

ಜಯತು ಜಯ ಕನ್ನಡತಿ ಹೇ ಭಾಗ್ಯದಾತೆ। ಜಯತು ಭುವನೇಶ್ವರಿಯೇ ನಮಿಪೆ ಧೀಮಂತೆ॥ಪ॥ ಶಂಕರರಿಗೊಲಿದು ನೀ ಶೃಂಗಪುರದಲಿ ನಿಂತೆ। ರಕ್ಕಸನ ಸಂಹರಿಸಿ ಚಾಮುಂಡಿಯಾದೆ। ನೀ ದುರ್ಗೆ ಮೂಕಾಂಬೆ ತಾಯಿ ಬನಶಂಕರಿ। ಎಲ್ಲಮ್ಮ ಅಣ್ಣಮ್ಮ ಅನ್ನಪೂರ್ಣೇಶ್ವರಿ॥1॥ ಈ ನೆಲವು ಈ ಜಲವು ನಿನ್ನ ಕರುಣೆಯ ಫಲವು। ಹರಸು ಬೆಳಗಲಿ ಎಂದು ಕನ್ನಡದ ಕುಲವು। ನೀನೊಲಿದರೀ ನೆಲವು ನಿತ್ಯ ಶ್ಯಾಮಲವು। ನಿನ್ನ ಸೇವೆಯ ಪೂಜೆ ನಮ್ಮ ಹಂಬಲವು॥2॥ ಕನ್ನಡವ ನುಡಿವುದೇ ನಿನ್ನ ಆರಾಧನೆ। ಕನ್ನಡವ ಕಲಿಸುವುದೇ ನಿನ್ನ ಔಪಾಸನೆ। ಕಾವ್ಯಗಳನ್ನೋದಿ ನಾವ್ ತಿಳಿಯುವೆವು ವೈಭವ। ತಾಯಿ ಭುವನೇಶ್ವರಿಯೇ ನಿನಗದುವೆ ಉತ್ಸವವು॥3॥

ಜೋಗದ ಸಿರಿ ಬೆಳಕಿನಲ್ಲಿ ರಾಗ: ಮಧ್ಯಮಾವತಿ

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ। ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲಿ। ನಿತ್ಯಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ। ನಿತ್ಯೋತ್ಸವ ತಾಯಿ ನಿತ್ಯೋತ್ಸವ-ನಿನಗೆ॥ ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ। ಗತಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ। ಓಲೆಗರಿಯ ಸಿರಿಗಳಲ್ಲಿ ದೇಗುಲಗಳ ಭಿತ್ತಿಗಳಲಿ। ನಿತ್ಯೋತ್ಸವ ತಾಯಿ ನಿತ್ಯೋತ್ಸವ-ನಿನಗೆ॥ ಹಲವೆನ್ನದ ಹಿರಿಮೆಯೆ ಕುಲವೆನ್ನದ ಗರಿಮೆಯೆ ಸದ್ವಿಕಾಸ ಶೀಲನುಡಿಯ ಲೋಕಾವೃತ ಸೀಮೆಯೆ। ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ। ನಿತ್ಯೋತ್ಸವ ತಾಯಿ ನಿತ್ಯೋತ್ಸವ ನಿನಗೆ॥

ಜೈ ಭಾರತ ಜನನಿಯ ರಾಗ: ಮಧ್ಯಮಾವತಿ

ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ। ಜಯ ಸುಂದರ ನದಿ ವನಗಳ ನಾಡೆ। ಜಯ ಹೇ ರಸಋಷಿಗಳ ಬೀಡೆ। ಭೂದೇವಿಯ ಮಕುಟದ ನವ ಮಣಿಯೆ ಗಂಧದಚಂದದ ಹೊನ್ನಿನ ಗಣಿಯೆ ರಾಘವ ಮಧೂಸೂದನರವತರಿಸಿದ॥ ಭಾರತ॥ ಜನನಿಯ ಜೋಗುಳ ವೇದದ ಘೋಷ। ಜನನಿಗೆ ಜೀವವು ನಿನ್ನಾವೇಶ। ಹಸುರಿನ ಗಿರಿಗಳ ಸಾಲೆ। ನಿನ್ನಯ ಕೊರಳಿನ ಮಾಲೆ। ಕಪಿಲ ಪತಂಜಲ ಗೌತಮ ಜಿನನುತ। ಭಾರತ ಜನನಿಯ ತನುಜಾತೆ॥ ಸರ್ವಜನಾಂಗದ ಶಾಂತಿಯ ತೋಟ। ರಸಿಕರ ಕಂಗಳ ಸೆಳೆಯುವ ನೋಟ। ಹಿಂದು ಕ್ರೈಸ್ತ ಮುಸಲ್ಮಾನ। ಪಾರಸಿಕ ಜೈನರುದ್ಯಾನ। ಜನಕನ ಹೋಲುವ ದೊರೆಗಳ ಧಾಮ। ಗಾಯಕ ವೈಣಿಕರಾರಾಮ॥ ಕನ್ನಡ ನುಡಿ ಕುಣಿದಾಡುವ ಗೇಹ। ಕನ್ನಡ ತಾಯಿಯ ಮಕ್ಕಳ ದೇಹ। ಜಯ ಭಾರತ ಜನನಿಯ ತನುಜಾತೆ। ಜಯಹೇ ಕರ್ನಾಟಕ ಮಾತೆ। ಜಯ ಸುಂದರ ನದಿವನಗಳ ನಾಡೆ। ಜಯಹೇ ರಸಋಷಿಗಳ ಬೀಡೆ॥

ಜ್ಯೋತಿ ಹರಿಯಿತು ನಮ್ಮ **ರಾಗ: ಬೃಂದಾವನಿ**

ಜ್ಯೋತಿ ಹರಿಯಿತು ನಮ್ಮ ಕನ್ನಡ ತಾಯಿನಾಡಿಗೆ। ಕಾವ್ಯ ಲಹರಿಯು ಹರಿವ ಶಿಲ್ಪದ ತವರು ಬೀಡಿಗೆ॥ಪ॥ ದಿನದಿನವು ನೀ ನೆನೆಯುತಿರೆ ಸಿರಿಗನ್ನಡದ ಚೆಲುವು। ಜಲದ ರಾಶಿಯು ತುಂಬಿ ತುಳುಕುವ ಭವ್ಯತೆಯ ನೆಲವು॥1॥ ರನ್ನ ಪಂಪರ ಕಾವ್ಯ ಕನ್ನಡದಿಂಚರ। ಕಂಪುಬೀರಿದೆ ಈ ನಾಡಿನಲೀ । ಮುದ್ದಣ ರಚಿಸಿದ ರಾಮಾಶ್ವಮೇದದ। ಮುದ್ದಾದ ನುಡಿಮುತ್ತು ಕನ್ನಡವು.... ಕನ್ನಡವು॥2॥ ಮಾಮರದ ಚಿಗುರೆಲೆಯ ಸವಿಯುತ್ತ ಕೋಗಿಲೆ। ಇನ್ನೊಮ್ಮೆ ಹಾಡಿತು ಮುಗಿಲೆತ್ತರ ಬಾನೆತ್ತರ ಸಿರಿಗನ್ನಡವೇ ಚೆಲುವು ಚಿರವಸಂತವೇ ಒಲವು। ಮರೆಯಲಾಗದು ನಮ್ಮ ಕನ್ನಡವು॥3॥

ತಾಯೇ ಕನ್ನಡದೇವಿ **ರಾಗ:ಮೋಹನ**

ತಾಯೇ ಕನ್ನಡದೇವಿ। ಕೈಗೊಳೆನ್ನೀ ಸೇವೆ। ತಾಯೇ ನಿನಗಳ್ತಿಯಿಂದೀವೆ ನುಡಿದೊಡವ ಪಂಪನೊಲು ಕಂಪುಗುವ ಕವನ ಕುಸುಮವನಿತ್ತು ಸೊಂಪಿನುತ್ಸವದಿ ಪೂಜಿಸಲರಿಯೆನು ರನ್ನ ಕವಿರನ್ನ ನೊಲು, ರತ್ನ ರಾಶಿಯನಿತ್ತು। ರತ್ನಗರ್ಭೇ ಎಂದು ಹೊಗಳಲರಿಯೆಂ। ಕನ್ನಡದ ಕವಿ ಚೂತವನ ಚೈತ್ರನೊಲುನಿನ್ನ ಭಾಗೋತ್ಸವಕೆ ಮಧುವ ತರಲಾರೆನು: ಒಣಗು ಕವಿಗಳನು ಲೆಕ್ಕಿಸದ ಕಬ್ಬಿಗರಾಯ ನೊಲುನಿನ್ನ ಕೀರ್ತಿಗಾನವ ಹಾಡೆನು॥ ಇನ್ನೆನಿತೊ ಇಂಪಿಂದ ಕವಿಗಳೆನಿಬರೊ। ಜನಿಸಿ ನಿನ್ನ ರೂಪವನು ಬಣ್ಣಿಸಿ ಬರೆದೊಡಂ। ಮುನ್ನೆಸೆವನಂತಕಾಲವೆ ನುಡಿಯಲಾಂ ನಿನ್ನ ಬಣ್ಣಿಸಿದೆನೋ ಇಲ್ಲವೆಂಬ ನಿಜವ॥

ತಾಯೆ ಬಾರ ಮೊಗವ ತೋರ

ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ। ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೇ॥ ನಮ್ಮ ತಪ್ಪನೆನಿತೊ ತಾಳ್ವೆ। ಅಕ್ಕರೆಯಿಂದೆಮ್ಮ ನಾಳ್ವೆ। ನೀನೆ ಕಣಾ ನಮ್ಮ ಬಾಳ್ವೆ। ನಿನ್ನ ಮರೆಯಲಮ್ಮೆವು। ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಂಬೆವು॥1॥

ತಿರೆಯ ಹೋರಾಟದಲಿ **ರಾಗ: ಶುದ್ಧಧನ್ಯಾಸಿ**

ತಿರೆಯ ಹೋರಾಟದಲಿ ಬಗೆಕದಡಿ ಕಂಗೆಡಲು। ನೇಹಿಗನೆ ಬಾ ಇಲ್ಲಿ ಶಾಂತಿ ಇರುವುದು(2ಸಾರಿ) ॥ಪ॥ ತಂಬೆಲರ ತೀಟವಿದೆ ಬಳಲಿಕೆಯ ಪರಿಹರಿಸೆ। ಮೋಹಿಸಲು ಕಂಗಳನು ಪರಮ ಸೌಂದರ್ಯವಿದೆ। ಜೀವವನು ಸಂತವಿಸೆ ದೇವಸಾನಿಧ್ಯವಿದೆ। ಸೋದರರನೆ ಬಾ ಇಲ್ಲಿ ಬಾ ಇಲ್ಲಿ ಬಾ (3ಸಾರಿ) ಧನ್ಯನಾಗುವೆ ಇಲ್ಲಿ ಪುಣ್ಯನಾಗುವೆ ಇಲ್ಲಿ। ಪೂರ್ಣನಾಗುವೆ ಇಲ್ಲಿ ಬೆಟ್ಟದಲ್ಲಿ (2ಸಾರಿ) ॥1॥ ತಾರೆಗಳ ತವರೂರು ಸಿಂಗರದ ಮೈಸೂರು। ಕನ್ನಡದ ಕುಶಲತೆಗೆ ಕನ್ನಡದ ರಸಿಕತೆಗೆ। ಕನ್ನಡದ ನಿಪುಣತೆಗೆ ಕನ್ನಡಿಯು ಮೈಸೂರು। ಕನ್ನಡಿಗರ ಎದೆ ಅರಿಯೆ ಕನ್ನಡಿಗರ ಒಲವರಿಯೆ। ಕನ್ನಡಿಗರ ಇಂಪರಿಯೆ ಸೋದರರನೆ ಬಾ ನೇಹಿಗನೆ ಬಾ....। ಲಲಿತ ಲಲಿತಾದ್ರಿಯಲಿ ನಿಂತು ನೋಡು॥(2ಸಾರಿ) ॥2॥

ತೇರನೇರು ಬಾ ತಾಯೆ **ರಾಗ: ಹಿಂದೋಳ, ಆದಿತಾಳ**

ತೇರನೇರು ಬಾ ತಾಯೆ ತೇರನೇರು ಬಾ ಕರುನಾಡ ಸಿರಿದೇವಿಯೆ ಹೊನ್ನ ತೇರನೇರಿಬಾ॥ ಪಂಪ ರನ್ನ ಹರಿಹರಾರ್ಯ ರಾಘವಾಂಕರು। ನಿನ್ನ ಮಹಿಮೆ ಸ್ಮರಿಸುತಾ ಮೈಯ ಮರೆಯುತಿಹರು। ಹಕ್ಕ ಬುಕ್ಕ ಚಾಲುಕ್ಯ ರಾಷ್ಟ್ರಕೂಟರು। ನಿನ್ನ ತೇರ ಸಿಂಗರಿಸಿ ಕಾದು ನಿಂತರು॥1॥ ಹಳೇಬೀಡು ಬೇಲೂರು ಕಲೆಯನ್ನು ಕೂಡಿ। ರಂಜಿಸುತ್ತಲಿಹುದು ಸಿರಿ ಕನ್ನಡದ ತೇರು। ಕಂಗು ತೆಂಗು ಕದಳಿ ಮಾವು ತರುಗಳ ತುಂಬಿ ಕಂಪ ಸೂಸುತಿಹುದು ಶ್ರೀಗಂಧದ ತೇರು॥2॥ ಕನ್ನಡಾಂಬೆ ನಿನ್ನ ಸುತರು ಕರವ ಕೂಡಿಸಿ ಜಯ ಕನ್ನಡ ಸಿರಿಕನ್ನಡ ಎಂದು ನುಡಿಯುತ। ನೀನು ಬರುವ ಹಾದಿಯಲ್ಲಿ ಗಂಧ ಕುಸುಮ ಚೆಲ್ಲಿ। ನಿನಗಾಗಿ ಕಾದಿಹರು ಕಾತರದಲ್ಲಿ॥3॥

ದೀಕ್ಷೆಯ ತೊಡು ಇಂದೇ **ರಾಗ: ಸಿಂಧುಭೈರವಿ**

ದೀಕ್ಷೆಯ ತೊಡು ಇಂದೇ। ಕಂಕಣ ಕಟ್ಟಿಂದೇ। ಕನ್ನಡ ನಾಡೊಂದೇ। ಇನ್ನೆಂದೂ ತಾ ನೊಂದೇ। ನೃಪತುಂಗನ ದೊರೆ ಮುಡಿಸಾಕ್ಷಿ। ಪಂಪನ ಪದ ಧೂಳಿಯೆ ಸಾಕ್ಷಿ। ಕೂಡಲ ಸಂಗನ ಅಡಿಸಾಕ್ಷಿ। ಗದುಗಿನ ಕವಿದೇವನೆ ಸಾಕ್ಷಿ॥1॥ ಇದು ಸಹ್ಯಾದ್ರಿಯ ಮೇಲಾಣೆ। ಇದು ಕಾವೇರಿಯ ಮೇಲಾಣೆ। ಇದು ಚಾಮುಂಡಿಯ ಮೇಲಾಣೆ ಇದು ಗೊಮ್ಮಟ ಗುರು ದೇವಾಣೆ॥2॥ ಕಾಣಲಿ ಕನ್ನಡ ವ್ಯೋಮಾಕ್ಷಿ। ನಿಲ್ಲಲಿ ರವಿಚಂದ್ರರ ಸಾಕ್ಷಿ। ಕೇಳಲಿ ಕನ್ನಡ ಪಶುಪಕ್ಷಿ। ಸರ್ವದೇವರೂ ಶ್ರೀಸಾಕ್ಷಿ॥3॥ ಇದು ನಿನ್ನಯ ಸತಿಯಾಣೆ। ಇದು ನಿನ್ನಯ ಪತಿಯಾಣೆ।ಮಕ್ಕಳ ಮೇಲಾಣೆ। ಅಕ್ಕರೆಮೇಲಾಣೆ ಗುರುದೇವರ ಆಣೆ। ನನ್ನಾಣೆ। ನೀನ್ನಾಣೆ ಕನ್ನಡ ಜನರೆಲ್ಲರ ಮೇಲಾಣೆ॥4॥ ಕನ್ನಡ ನಾಡೊಂದಾಗದೆ ಮಾಣೆ। ತೊಡು ದೀಕ್ಷೆಯ ಇಡು ರಕ್ಷೆಯ ಕಂಕಣ ಕಟ್ಟಿಂದೇ ಕನ್ನಡ ನಾಡೊಂದೇ ಎಂದೆಂದೂ ತಾನೊಂದೇ ॥5॥

ನಮ್ಮ ನಾಡಿನಾ ಹೆಸರು **ರಾಗ: ಸಿಂಧುಭೈರವಿ**

ನಮ್ಮ ನಾಡಿನಾ ಹೆಸರು ಕರ್ನಾಟಕ। ನನ್ನೀ ಎಂದೆಂದಿಗೂ ಅದೆ ತಾರಕ। ಉಳಿದ ಮಾತೆಲ್ಲವೂ ಬರಿನಾಟಕ। ಹಳೆಯ ಜನರಿಗಿದು ನಿತ್ಯ ಆಸ್ಫೋಟಕ॥ ಒಂದು ಊರಿನ ಹೆಸರು ನಾಡಿಗೇಕೆ। ಎಂದಿಗಾದರೂ ಹಸಿರು ಒಣಗಬೇಕೆ। ಕರ್ನೆಲದ ನಾಡೆಲ್ಲ ಕರ್ನಾಟಕ। ಚಿನ್ನದಾ ಬೀಡೆಲ್ಲ ಕರ್ನಾಟಕ॥ ಕನ್ನಡಿಗರೊಂದಾಗಿ ನಾಡಕಟ್ಟಿ। ನಮ್ಮೀದಾರಿದ್ರ್ಯವನು ತುಳಿದು ಮೆಟ್ಟಿ। ಎದ್ದೇಳಿ ಜನಹಿತಕೆ ಸೊಂಟ ಕಟ್ಟಿ। ಎದ್ದೇಳಿ ಭಾರತಿಯ ಪಾದಮುಟ್ಟಿ॥ ಸಂಕುಚಿತ ಭಾವನೆಯ ಬಿಟ್ಟುಬನ್ನಿ। ಲೋಕಚಿಂತನೆಗಾಗಿ ಮುಂದೆ ಬನ್ನಿ। ಸಣ್ಣತನದಲಿ ನಡೆಯಲಾರೆವೆನ್ನಿ। ಕನ್ನಡದ ಕೀರ್ತಿಯನು ಉಳಿಸಬನ್ನಿ। ಕನ್ನಡದ ನಾಡುಗಡಿ ತಲೆಯೆತ್ತಲಿ। ಕನ್ನಡಿಗರೊಂದಾಗಿ ಗುರಿಮುಟ್ಟಲಿ॥ ಆದಿ ಪಂಪನ ನಾಡು ರನ್ನ ಜನ್ನರ ನಾಡು। ಜಕ್ಕಣನ ತಾಯ್ನೆಲವು ಕರ್ನಾಟಕ ಹಕ್ಕಬುಕ್ಕರ ನೆಲೆಯು। ಶೂರಧೀರರ ನಾಡು ವೀರ ಹನುಮನ ನಾಡು ಕರ್ನಾಟಕ॥ ಕವಿಗಳಿಗೆ ಸಿರಿನೆಲೆಯು ಸವಿನುಡಿಗೆ ಚಿರನೆಲೆಯು ದಾನಧರ್ಮದ ನಾಡು ಕರ್ನಾಟಕ। ವಚನಕಾರರ ನಾಡು ಧರ್ಮಕ್ಕೆ ನೆಲೆವೀಡು ಕರ್ಮಕುಶಲಿಯ ನಾಡು ಕರ್ನಾಟಕ॥ ಮೈಸೂರು ಕನ್ನಡದ ಸಿರಿಯ ಕುವರಿ ಮೈಸೂರು ನಮಗೆಲ್ಲ ಪೂಜ್ಯಗೌರಿ। ನಿನ್ನ ಸಿರಿ ಪಾದಕ್ಕೆ ಕೋಟಿ ನಮನ ಹರಸಮ್ಮ ನಾಡವರ ತೆರೆದು ನಯನ॥

ನಮ್ಮದಾದ ಭಾಷೆಯು **ರಾಗ: ಮೋಹನ**

ನಮ್ಮದಾದ ಭಾಷೆಯು ನಿಮ್ಮದಾದ ಭಾಷೆಯು। ಸೊಗಸಾದ ಕನ್ನಡವು ಅಲ್ಲವೇ? ಮಧುರ ಗೀತೆ ಹಾಡಿರೈ ಕನ್ನಡದ ಬಾಂಧವರೆ। ಕನ್ನಡದ ಚೆಲುವನ್ನು ಕೊಂಡಾಡಿರೈ॥1॥ ಕಷ್ಟವಾದರೆ ಇದು ಕಲ್ಲುಸಕ್ಕರೆ। ಇಷ್ಟವಾದರೆ ಇದು ಹಾಲು ಸಕ್ಕರೆ। ಕವಿಯು ಕಂಡರೆ ಇದು ಮೋಹದಪ್ಸರೆ। ನಾಡಿನ ಕಲೆಯು ಬೆಳಗಿ ಬೆಳಗೆ ಇದು ಅಕ್ಕರೆ॥2॥ ಆದರದ ಸ್ವಾಗತವ ನೀಡುವೆವು ನಾವು। ಕನ್ನಡಿಗ ನೊಬ್ಬನು ನಕ್ಕರೆ। ಅನ್ಯಭಾಷೆಗೆ ಇದು ದ್ವೇಷಿ ಅಲ್ಲಾ। ತನ್ನ ತಿರುಳಿಗೆ ಇದು ಗರ್ವಿಅಲ್ಲ। ಜ್ಞಾನ ಭಂಡಾರಕ್ಕೆ ಕಡಿಮೆ ಇಲ್ಲ। ಆದಿಕಾಲದಿಂದಲೂ ತನ್ನ ಹಾದಿಯಲ್ಲಿ। ಧಕ್ಕೆ ಬಂದರೂ ಇದು ಕುಗ್ಗಲಿಲ್ಲ॥3॥ ಗಿರಿಗಳ ನಡುವಿನ ಗಾಂಭೀರ್ಯವು। ನದಿಗಳ ಬಳುಕಿನ ವಯ್ಯಾರವು। ತುಂಬಿಹುದು ಕನ್ನಡದ ರಾಜ್ಯದಲ್ಲಿ। ಶೃಂಗಾರ ರೂಪವು ವೀರರ ಕೋಪವು। ಅಡಗಿಹುದು ಕನ್ನಡದ ಕಾವ್ಯದಲ್ಲಿ॥4॥

ನಮ್ಮ ನಾಡಿದು ನಮ್ಮದು **ರಾಗ: ಹಿಂದೋಳ**

ನಮ್ಮ ನಾಡಿದು ನಮ್ಮದು ನಮ್ಮ ಕನ್ನಡ ನಾಡಿದು। ನೆಮ್ಮದಿಯ ತವರೂರಿದು। ಕಂಗು ಬೆಳೆಯುವ ನಾಡಿದು। ತೆಂಗು ಬೆಳೆಯುವ ನಾಡಿದು। ನಮ್ಮ ಕನ್ನಡ ನಾಡಿದು ನಮ್ಮನಾಡಿದು ನಮ್ಮದು॥1॥ ಅರಳು ಮಲ್ಲಿಗೆ ನಾಡಿದು। ಕೆಂಡಸಂಪಿಗೆ ನಾಡಿದು। ಕೋಗಿಲೆಯ ತವರೂರಿದು। ಭಾರಿ ಸೊಬಗಿನ ನಾಡಿದು। ನಮ್ಮ ಕನ್ನಡ ನಾಡಿದು। ನಮ್ಮ ನಾಡಿದು ನಮ್ಮದು॥2॥ ಭತ್ತ ಬೆಳೆಯುವ ನಾಡಿದು। ಮುತ್ತು ಬೆಳೆಯುವ ನಾಡಿದು। ಹೊನ್ನ ಬೆಳೆಯುವ ನಾಡಿದು। ಅನ್ನ ನೀಡುವ ನಾಡಿದು। ನಮ್ಮ ಕನ್ನಡ ನಾಡಿದು। ನಮ್ಮ ನಾಡಿದು ನಮ್ಮದು॥3॥ ಹಲವು ಕವಿಗಳ ಬೀಡಿದು। ವೀರಶೂರರ

ನಾಡಿದು। ನಾವು ಹುಟ್ಟಿದ ನಾಡಿದು। ತಾಯಿ ನಾಡಿದು ನಮ್ಮದು। ನಮ್ಮ ಕನ್ನಡ ನಾಡಿದು। ನಮ್ಮ ನಾಡಿದು ನಮ್ಮದು।।4।।

ನವೋದಯದ ಕಿರಣ ಲೀಲೆ — ರಾಗ: ಸಾವೇರಿ

ನವೋದಯದ ಕಿರಣ ಲೀಲೆ ಕನ್ನಡದೀ ನೆಲದ ಮೇಲೆ। ಶುಭೋದಯವ ತೆರೆದಿದೆ। ನದ ನದಿಗಳ ನೀರಿನಲ್ಲಿ। ಗಿರಿವನಗಳ ಮುಡಿಗಳಲ್ಲಿ। ಶಿಲ್ಪಕಲಾ ಗಾನಕಾವ್ಯ। ಗುಡಿಗೋಪುರ ಶಿಖರದಲ್ಲಿ।।1।। ಮುಗ್ಧ ಜಾನಪದಗಳಲ್ಲಿ ದಗ್ದನಗರ ಗೊಂದಲದಲ್ಲಿ। ಯಂತ್ರತಂತ್ರದಟ್ಟಹಾಸ। ಚಕ್ರಗತಿಯ ಪ್ರಗತಿಯಲ್ಲಿ।। ಹಿರಿಯರಲ್ಲಿ ಕಿರಿಯರಲ್ಲಿ। ಹಳಬರಲ್ಲಿ ಹೊಸಬರಲ್ಲಿ। ಹೊಸ ಚೇತನದುತ್ಸಾಹದಿ। ಚಿಲುಮೆ ಚಿಮ್ಮುವೆಡೆಗಳಲ್ಲಿ।।2।।

ನಾಡವರು ನಾವು ಕರುನಾಡವರು

ನಾಡವರು ನಾವು ಕರುನಾಡವರು। ನಾವು ಹಿರಿನಾಡವರು।।ಪ।। ಹಿರಿದಾಗಿ ನೋಡುವಾ ಅರಿದಾಗಿ ಕೂಡುವಾ। ಹಿರಿಹಿರಿದನಾಡುವಾ ಬೆರಗಾಗೆ ಮಾಡುವಾ।।1।। ವಿಶ್ವಮಾತೆಗೆ ಮಣಿದು ಭಾರತಕೆ ಕೈ ಮುಗಿದು। ಹೆತ್ತಾಯಿ ಕನ್ನಡಕೆ ಬಾಳ ಕಾಣಿಕೆಯೀವ।।2।।

ನಾಡಿನ ಪುಣ್ಯದ ಪೂರ್ವದಿಗಂತದಿ — ರಾಗ: ತಿಲಂಗ್

ನಾಡಿನ ಪುಣ್ಯದ ಪೂರ್ವದಿಗಂತದಿ ನವ ಅರುಣೋದಯ ಹೊಮ್ಮುತಿದೆ। ಚಿರನೂತನ ಚೇತನದುತ್ಸಾಹದಿ ನವೀನ ಜೀವನ ಚಿಮ್ಮುತಿದೆ।।1।। ಅಭಿನವ ಮಧು ಕೋಕಿಲ ಕಲಕಂಠದಿ ಸ್ವರಸುರಚಾಪಗಳುಣ್ಮುತಿವೆ। ಶ್ಯಾಮಲ ಕಾನನಸುಮ ಸಮ್ಮೇಳದಿ(2ಸಾರಿ) ಇಂಚರ ಸಾಸಿರ ಹೊಮ್ಮುತಿದೆ।।2।। ಕಿವಿಕಣ್ಣಾಗುತಿದೆ। ಕಣ್ ಕಿವಿಯಾಗುತಿದೆ। ಭೂವ್ಯೋಮದ ನೀಲಾಂಗಣದಲಿ ಕೆಂದೆರೆ ಮುಗಿಲಿನ ರಂಗೋಲಿ। ರಂಜಿಸುತಿದೆ ಹೊಳೆ ತೆರೆಯಚ್ಛೊತ್ತಿದ ಕೆಂಪಗೆ ನುಣ್ಮಳಲನು ಹೋಲಿ।।3।। ಹಿಮಮಣಿ ಸಿಂಚಿತ ತೃಣವಿಸ್ತಾರದಿ(2ಸಾರಿ) ನೇಸರು ಕಿಡಿಬಲೆ ನೇಯುತಿದೆ। ವಿಹಂಗ ದಂಪತಿ ತರುಶಾಖಾಗ್ರದಿ ಪ್ರೇಮಾಲಾಪನೆ ಗೈಯುತಿದೆ। ನವೀನ ಹೃದಯಗಳೇಳಿ ನವೀನ ಗಾನವ ಕೇಳಿ।।4।।

ನಂಬು ಕನ್ನಡವನ್ನು ನಂಬು

ನಂಬು ಕನ್ನಡವನ್ನು। ನಂಬು ಕನ್ನಡ ಜನವ। ನಂಬು ಕನ್ನಡ ನಾಡ। ಭವಿತವ್ಯವನ್ನು।। ನಂಬು ಕನ್ನಡ ಕುಲವ। ನಂಬು ಕನ್ನಡ ಕಲೆಯ। ನಂಬು ಕನ್ನಡದಮಲ ಕಾವ್ಯವನ್ನು।।1।। ಏನಾದರೂ ಗಳಿಸು ಎಂತಾದರೂ ಬಳಸು। ಕನ್ನಡದ ಕುಲವನ್ನು ಮಾತ್ರ ಉಳಿಸು। ಕನ್ನಡದ ಮೂಲಕವೆ ಕನ್ನಡಿಗನುದ್ಧಾರ। ಕನ್ನಡದಿ ನಂಬಿಕೆಯನುಳಿಸಿ ಬೆಳಸು।।2।। ಕನ್ನಡಕೆ ಒಲವಕ್ಕೆ ಕನ್ನಡಕೆ ಗೆಲವಕ್ಕೆ। ಕನ್ನಡದ ಕುಲ ನಿತ್ಯ ಸತ್ಯವಕ್ಕೆ। ಕನ್ನಡದ ಪ್ರೇಮವೇ ಕನ್ನಡಿಗನುಸಿರಕ್ಕೆ। ಬರದಿರಲಿ ಎಂದಿಗೂ ಕನ್ನಡಕೆ ಧಕ್ಕೆ।।

ನಾನ್ ಉಟ್ಟೀದ್ ಒಡ್‌ರಳ್ಳಿ

ನಾನ್ ಉಟ್ಟೀದ್ ಒಡ್‌ರಳ್ಳಿ ಬೆಳದದ್ದು ಬ್ಯಾಡರಳ್ಳಿ ಮದುವೆ ಮಾದನ್ನೋಲಗೋಳ್ ಅರ್ನಳ್ಳಿ ನಂ ಶಾನಭೋಗಯ್ಯ ಅಲ್ದೆ ಶೇಕ್‌ದಾರಪ್ಪ ಇವ್ರೆಲ್ರೂ ಕಂಡವ್ರೆ ನನ್ನಾ ದನಗೋಳ್ನು ಮಕ್ಕುಳ್ನೂ ಎಂಡ್ರನ್ನೂವೆ। ಅಟ್ಟೀಲ್ ಎಲ್ಲಾರ್ನೂ ಬುಟ್ಟಿ ಬಂದೀವ್ನಿನಾ ನಿಂಮುಂದೆ ನಿಂತೀವ್ನಿ ನಾ ನಮ್ಮಳ್ಳೀ ಕಿಲಾಡಿ ವುಂಜ ನಾ ಕೋ ಕೋ ಕೋಳಿಕೆ ರಂಗಾ ಕೋನು ಕೀನು ಕೇನು ರಾನು ಸೊನ್ನೆಯೊನುಗಾ ನಾ ಕೋ ಕೋ ಕೋಳಿಕೆರಂಗಾ ನಂ ತಿಪ್ಪಾರಳ್ಳಿ ಬೋರನ್ ಅಣ್ಣನ್ ತಮ್ಮನ್ ದೊಡ್‌ಮಗ ಕಕೋತ್ವ-ಳಿ ಕಕೇತ್ವ-ರ ಮತ್ ಸೊನ್ನೆಯೂನುಗಾ। ಇದನ್ ಓದೋಕ್ ಬರ್ದೆ ಬಾಯ್ ಬಿಡೋನ್ ಬೆಪ್‌ನನ್‌ಮಗ। ನಾ ಕೋ ಕೋ ಕೋಳಿಕೆ ರಂಗ।। ಎತ್ತು ಕುದುರೆ ಇಲ್ಲದ್ ಗಾಡಿಗಳು ಬತ್ತಿ ಯೆಣ್ಣೆ ಇಲ್ದ ದೀಪಗಳು ಕುದುರೆ ಇಲ್ದ ಗಾಡಿಗಳು ಎಣ್ಣೆ ಇಲ್ದ ದೀಪಗಳು ತುಂಬಿದ್ ಮೈಸೂರ್‌ಗ್ ಬಂದೆ ಗಡಿಯಾರದ್ ಹಿಂದೆ ದೊಡ್

ಚೌಕದ್ ಮುಂದೆ ಕಟ್ ತಂದೀದ್ ಬುತ್ತೀನ್ ತಿಂತಿದ್ದೇ। ಅಲ್ಲೇ ಕುದ್ರೆ ಮೇಲೆ ಕುಂತಿದ್ ಒಬ್ ಸವಾರಯ್ಯ ಕೆದ್ರಿದ್ ಮೀಸೆಮೇಲೆ ಆಕ್ದ ತನ್‌ಕೈಯ ಬೆದ್ರಿಸ್ತಾಲೀ ನನ್ ಗದ್ರಿಸ್ತಾಲೀ ನನ್ನ ಯಾಕೋ ಯಾರೋ ಏನೋ ನಾನ್ ಕೋ ಕೋ ಕೋಳಿಕೆ ರಂಗಾ॥

ನೋಡಿಲ್ಲಿ ಕಾವೇರಿ ನೀಳ್ದೋಳ್ಗಳಿಂದೆತ್ತಿ (ಶ್ರೀರಂಗಪಟ್ಟಣದ ವರ್ಣನೆ)

ನೋಡಿಲ್ಲಿ ಕಾವೇರಿ ನೀಳ್ದೋಳ್ಗಳಿಂದೆತ್ತಿ ಆಡಿಸಿದ ಮಗುವಿನೀ ಕ್ರೂರವಿಧಿ ನೋಟಂ। ಮಳೆ, ಬಿಸಿಲ್, ಬಿರುಗಾಳಿ, ಬರಸಿಡಿಲ್ಗಳ ನುಂಗಿ ಮಲೆನಾಡ ಗರ್ಭದಲಿ ಬಳೆದುದಿಸಿ ಬಂದು। ಇಳೆಯೊಳೆಲ್ಲೆಡೆ ತನ್ನ ಆಟಪಾಟವ ತೋರಿ, ನಲಿದುಲಿದು, ಮರುಳಾಗಿ, ಮುಗುಳು ನಗೆಗಳ ಬೀರಿ। ಧರೆಯ ನಾಯಕರನೆಲ್ಲರ ನೇಹಿಗರ ಮಾಡಿ ಉರಿವೆದೆಯ ಕೆಚ್ಚಿಂದಲವರೊಡನೆ ಎಳೆದಾಡಿ। ಕೊನೆಗಿಂತು ಮೌನದಲಿ ಭೀಕರದ ಮೌನದಲಿ, ಮುನಿಸಿ ಸಮಾಧಿಯಲಿ ಕುಳಿತಿರ್ಪವೊಲು ಕುಳಿತಿಹನು॥1॥ ಇನ್ನೂರು ವರುಷಗಳ ಜವನಿಕೆಯ ಹಿಂದೆ, ಚಿತ್ರಿಸಿರುವಾ ನೋಟವೆಲ್ಲ ಕಣ್ಮುಂದೆ। ಎರಡು ಶತಕದ ಮೊದಲ ರಾಜವೀಥಿಗಳು, ಹರಿವ ಕಾವೇರಿ ನಿರ್ಮಲ ತರಂಗಿಣಿಯು। ಮೇಲ್ಮುಗಿಲ ಮುದ್ದಿಡುವ ಕೊತ್ತಳದ ಸಾಲು, ಕೊತ್ತಳದ ಮೇಲ್ನಿಂತ ಸೈನಿಕರ ಸಾಲು। ಅಲ್ಲಲ್ಲಿ ಸಿಡಿಮದ್ದು ಭಾಂಡಗಳು, ತೋಪು। ಕಾವಲರ, ಕಾಲಾಳ ಎಚ್ಚರದ ಕಾಪು। ಮೈಸೂರ ಭೂಪತಿಯ ಕೀರ್ತಿಸುವ ಭೇರಿ, ನಾಲ್ದೆಸೆಯ ಮೊಳಗಿಸುವ ಯುದ್ಧದ ತುತ್ತೂರಿ॥2॥ ಇಲ್ಲಿಹುದು ಸುಲ್ತಾನನರಮನೆಯ ಸಾಲು। ಕನಸುಗಳ ಕಲ್ಗವನ ಸಿರಿಯ ಹಿರಿ ಬಾಳು। ಆರಲ್ಲಿ, ಹಿರಿದ ಬಾಳ್ ಝಳಪಿಸುತ ನಿಂತು ದೂರದ ದಿಗಂತವನು ದಿಟ್ಟಿಸುವುದಿಂತು? ಓಹೊ ಕಲಿ ಸುಲ್ತಾನ ಮೈಸೂರ ಹುಲಿಯು, ಕೆಚ್ಚೆದೆಯ, ಕೆಂಗಣ್ಣ ರಣ ಕುತೂಹಲಿಯು। ಸಿಡಿಲಂತೆ ಘುಡುಘುಡಿಸಿ ಹೊಡೆವ ಬಲ್ದನಿಯಿಂ ಪಡೆವಳರನೆಚ್ಚರಿರ್ಪುವಾರ್ಭಟವಿದೇನು? ಶ್ರೀರಂಗಪಟ್ಟಣವ ಮುತ್ತಿದವು ಮುಂದೆ॥3॥ ನುಡಿದ ನುಡಿ ಸಿಡಿದ ಕಿಡಿ ಕಾಳ್ಗಿಚ್ಚಿನಂತೆ ಹಬ್ಬುತಲಿ ಗಡಣಿಸಿತು ಸೈನಿಕರ ಸಂತೆ। ನುಗ್ಗಿ ನಡೆ ಕುಗ್ಗದೆಯೆ ಮುಂದೆ ದೌಡೆತ್ತಿ। ಬಗ್ಗಿ ಬಡಿ ಹಿಗ್ಗಿ ಹಿಡಿ ನೆಗ್ಗಿ ನೆಡು ಕತ್ತಿ। ಕಣೆ ಖಣಿಲ್, ಗಣಘಣಿಲ್ ಘನ ನಿನಾದದಲಿ ಕುಣಿದು ರಣಸಿರಿಯನೊಲಿಸಿದರು ಮೋದದಲಿ। ಅರ್ಧಚಂದ್ರೋ ದಯದ ಕೇತನದ ಕೆಳಗೆ ಆರ್ಭಟಿಸಿ ಮೈಮರೆದು ಕಾದಿದರು ಇಳೆಗೆ। ನೂರು ಸಾವಿರ ಯೋಧರೊಂದಾಗಿ ನುಗ್ಗಿ॥4॥ ಸುಲ್ತಾನ ಸೇನೆಯನು ಕಬಳಿಸಿದರೊಗ್ಗಿ ನೆತ್ತರು ನೆತ್ತರು ನೆತ್ತರಿನ ಹೊಳೆಯು ಕತ್ತಿಗಳ, ಕೈದುಗಳ ಗುಂಡುಗಳ ಮಳೆಯು ಆರಿವಂ ಬಾಗಿಲೆಡೆ ಬಿದ್ದಿಹುದು ಮಡಿದು ಆರಿಲ್ಲ ಬಿಸಿರಕುತ ಕೈಕಾಲ್ಗಲುಡಿದು ಅಯ್ಯೋ ಕಲಿ ಸುಲ್ತಾನ। ಮೈಸೂರ ಸಿಂಹ ಹಾರಾಡಿ ಹೋರಾಡಿ ಮಲಗಿಹುದೆ ಸಿಂಹ॥5॥ ಓ ಯಾತ್ರಿಕನೆ ಏಕಿಂತು ಸ್ತಬ್ಧನಾಗಿರುವೆ ಮಾತಿಲ್ಲದೇಕಿಂತು ಮೌನವಾಗಿರುವೆ ಕಣ್ಣೀರ ಕೋಡಿಯಂ ನಿನ್ನ ಕಣ್ಗಳಲಿ ಈ ಪರಿಯ ನಡುಕವೇನ್ ನಿನ್ನಂಗಗಳಲಿ। ಸೊಬಗುಗುವ ಹೂದೋಟ ಮಸಣ ವಾಯ್ತೆಂದೋ। ಸೊಬಗಳಿದ ಸಿರಿಯುಳಿದ ಕಾಡಾಯ್ತಿದೆಂದೋ। ಅರೆನಿಮಿಷ ಕಣ್ಮುಚ್ಚಿ ಭಾವದಲಿ ನೋಡು ಬಿರಿದೆಸಳ ಹೂವಾಗಿ ತೋರ್ಪುದೀ ಕಾಡಿ॥6॥ ಚಿತ್ತಭಿತ್ತಿಯೊಳಿಂತು ಚಿತ್ರಗಳು ತೋರಿ ನೋಟಕನ ಕಣ್ಮನವ ಸೆಳೆಯುವುವು ಸಾರಿ। ಕೊತ್ತಳಂ ಕಲ್ಗುಪ್ಪೆ ಬೀದಿ ಮುಳ್ದೋಟ ಸುಲ್ತಾನನರಮನೆಯು ತಿಪ್ಪೆಗಳ ಕೂಟ। ಛಲದಿಂದ ಕೌರವನ ಸಿರಿಯವೊಲ್ ಮೆರೆದು ಬಲದಿಂದ ಬಲರಾಮ ನುರ್ಕಿನೋಲ್। ಉರಿದು ಕೊನೆಗಿಂತು ಬಯಲ ತಂಗಾಳಿಯಲ್ ಪರಿದು ಮಾತುಳಿದು ಮೌನದಿಂ। ಬಿದ್ದಿಹುದು ಬರಿದು ಕವಿಯ ಭಾವಕ್ಕೊಂದು ರಾಗ ವೀಯುವುದು ಭುವಿಯ ಭಾಗ್ಯಕ್ಕೊಂದು ಹೆಸರನೀಯುವುದು॥7॥

ಬನ್ನಿರಣ್ಣ ಬನ್ನಿರಕ್ಕ ಒಂದುಗೂಡುವಾ

ಬನ್ನಿರಣ್ಣ ಬನ್ನಿರಕ್ಕ ಒಂದುಗೂಡುವಾ। ಇಂದಿನಿಂದ ನಾಡಿಗಾಗಿ ನಾವು ದುಡಿಯುವಾ...॥ಪ॥ ನಾಡ ಏಳ್ಗೆ ನಮ್ಮ ಏಳ್ಗೆ ನಾಡ ಅಳಿವು ನಮ್ಮ ಅಳಿವು। ನಾಡಿಗಾಗಿ ನಮ್ಮ ಜೀವ ಮುಡಿಪು ಎನ್ನುವ॥1॥ ಧನಿಕನಿರಲಿ ಬಡವನಿರಲಿ ಹಿರಿಯನಿರಲಿ ಕಿರಿಯನಿರಲಿ। ನಾಡೆ ನಮ್ಮ ಉಸಿರು ಎಂದು ಅರಿತು ನಡೆಯುವಾ॥2॥ ಕನಸಿನಲ್ಲಿ ಮನಸಿನಲ್ಲಿ ಕಾಯದಲ್ಲಿ ಕಸುಬಿನಲ್ಲಿ। ನಮ್ಮ ನಾಡ ಮರೆಯದಂತೆ ನಾವು ಸಾಗುವಾ॥3॥

ಬಾಗಿಲೊಳು ಕೈ ಮುಗಿದು **ರಾಗ: ಶ್ರೀರಂಜನಿ-ಖಂಡಛಾಪು**

ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ। ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು।। ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು। ಧನ್ಯತೆಯ ಕುಸುಮಗಳನರ್ಪಿಸಿಲ್ಲಿ।।1।। ಗಂಟೆಗಳ ಧ್ವನಿಯಿಲ್ಲ ಜಾಗಟೆಗಳಿಲ್ಲಿಲ್ಲ। ಕರ್ಪೂರದಾರತಿಯ ಜ್ಯೋತಿಯಿಲ್ಲ। ಭಗವಂತನಾನಂದ ರೂಪುಗೊಂಡಿಹುದಿಲ್ಲಿ। ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ।।2।। ಸರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ। ಬಾದರಾಯಣ ನಂತೆ ಭಾರತವ ಹಾಡುತಿಹುದಿಲ್ಲಿ। ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ। ಮೂರ್ಛೆಯಲಿ ಮೈ ಮರೆತು ತೇಲುವುದು ಭೂ ಭಾರವಿಲ್ಲಿ।।3।।

ಬಾರಣ್ಣ ನೀನು ನೋಡುಬಾರಣ್ಣ (ಸಂಭಾಷಣಾ ಗೀತೆ) **ರಾಗ:ದುರ್ಗ**

ಬಾರಣ್ಣ ನೀನು ನೋಡುಬಾರಣ್ಣ ನಮ್ಮ ಚೆಲುವ ಕನ್ನಡ ನಾಡ ಸೊಬಗ ನೋಡಣ್ಣ।।ಪ।। ಬಾರಕ್ಕ ನೀನು ನೋಡುಬಾರಕ್ಕ ನಮ್ಮ ಚೆಲುವ ಕನ್ನಡ ನಾಡ ಸೊಬಗ ನೋಡಕ್ಕ।।ಪ।। ಸುಂದರವಾದ ಕನ್ನಂಬಾಡಿ ಬಣ್ಣದ ದೀಪದಿಂದ ಕೂಡಿ ನೋಡಕ್ ಬಲುಚೆಂದಾಗೈತಣ್ಣ।।1।। ಚೆನ್ನಕೇಶ್ವರ ನಿಂತ್ಕೊಂಡಂಥ ಬೇಲೂರ್ ದೇವಸ್ಥಾನದಲ್ಲಿ। ಕಲ್ಲಿನಲ್ಲಿ ಚಿತ್ರ ಕೊರೆದವ್ರೆ।।2।। ಹಳೇಬೀಡು ದೇವರಿಗೆ ಪೂಜೆಮಾತ್ರ ನಡ್ತಾಕಿಲ್ಲ। ನೋಡಕ್ ಬಲು ಚೆಂದಾಗೈತಣ್ಣ।।3।। ಬಣ್ಣದ್ ಸಾಮಾನ್ ಮಾಡೋ ಪಟ್ಣ ಸುಣ್ಣಕ್ಹೆಸರು ಪಡೆದ ನಮ್ಮ। ಚನ್ನಪಟ್ಣ ನೋಡು ಬಾರಕ್ಕಾ।।4।। ಬೆಟ್ಟದ ಮೇಲೆ ಕಲ್ಲಿನ್ ಬಸ್ವ ಗುಟ್ರುಹಾಕ್ತಾ ಕುಂತ್ಕೊಂಡೈತೆ। ಮೆಟ್ಲು ಹತ್ತಿ ನೋಡುಬಾರಣ್ಣ।।5।। ರಾಜರ ವಂಶ ನಿಲ್ಸಿದಂಥ ಚಾಮುಂಡಿ ಬಂದು ನೆಲ್ಸಿದಂಥ। ಬೆಟ್ಟ ಸುತ್ತಿ ನೋಡುಬಾರಕ್ಕಾ।।6।। ವಜ್ರಮುಡಿ ಧರ್ಸ್‌ಕೊಂಡಿರುವ ಚೆಲುವರಾಯ ನಿಂತ್ಕೊಂಡಿರುವ। ಮೇಲುಕೋಟೆ ನೋಡುಬಾರಣ್ಣ।।7।। ಹೈದರಿದ್ದ ಪಟ್ಣದಲ್ಲಿ ರಂಗನಾಥ ಮಲ್ಕೊಂಡವ್ನೆ। ಟಿಪ್ಪುಗೋರಿ ಐತೆ ನೋಡಕ್ಕಾ।।8।। ವರ್ಷಕ್ಕೆ ರಡು ಒಬ್ಬರಂತೆ ಅಷ್ಟಯತಿಗಳ್ ಪೂಜೆಮಾಡೊ। ಉಡುಪಿ ಕೃಷ್ಣನ್ ನೋಡುಬಾರಣ್ಣ ।।9।।

ಬಾರಿಸು ಕನ್ನಡ ಡಿಂಡಿಮವ **ರಾಗ:ಹಂಸಧ್ವನಿ-ಏಕತಾಳ**

ಬಾರಿಸು ಕನ್ನಡ ಡಿಂಡಿಮವ। ಓ ಕರ್ನಾಟಕ ಹೃದಯ ಶಿವಾ। ಬಾರಿಸು ಕನ್ನಡ ಡಿಂಡಿಮವಾ।।ಪ।। ಸತ್ತಂತಿಹರನು ಬಡಿದೆಚ್ಚರಿಸು। ಕಚ್ಚಾಡುವರನು ಕೂಡಿಸಿ ಒಲಿಸು। ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು। ಒಟ್ಟಿಗೆ ಬಾಳುವ ತೆರದಲಿ ಹರಸು।।1।। ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ। ಮೂಡಲಿ ಮಂಗಳ ಮತಿಮತಿಯಲ್ಲಿ। ಕವಿಋಷಿ ಸಂತರ ಆದರ್ಶದಲಿ। ಸರ್ವೋದಯವಾಗಲಿ ಸರ್ವರಲಿ ।।2।।

ಬೈಗುಮಾಗಿದೆ ಬಾನನೇರುತ (ಚಿತ್ರದುರ್ಗದ ವರ್ಣನೆ)

ಬೈಗುಮಾಗಿದೆ ಬಾನನೇರುತ ನೆಲೆಗೆ ನಿಂತಿದೆ ಈ ನಿಶೆ। ದೆಸೆಯ ತಬ್ಬಿದೆ ಹಬ್ಬಿ ಹರಡಿದೆ ಕುಗ್ಗುತಿದೆ ಬಯಲಿನ ಬಗೆ. ಕುರುಬನಿಲ್ಲದ ಹಿಂಡಿನಂತಿದೆ ದುರ್ಗದಲಿ ಕಲುಬಂಡೆಯುಡೆ।।1।। ಅತ್ತ ಗುಡ್ಡದ ಮುಕ್ತ ಮೂಲೆಗೆ ಕಪ್ಪು ತೊಡೆದಿದೆ, ಕೆಟ್ಟಿದೆ ಗಾಳಿ ಬೀಸಿದೆ, 'ಹೋ' ಎನ್ನುತ ಯಾರು ಯಾರನೊ ಕರೆದಿದೆ। ಎದ್ದು ಮೊರೆಯುತ ಸದ್ದ ಕಾರುತ ವೀರಗತೆಗಳನೊರೆದಿದೆ. ಕಡುಗಲಿಗಳನು ನೆನೆನೆನೆದು ಇಂದಿನಯುವಕ ವೃಂದದ ಕರೆದಿದೆ।।2।। ಹಿಂದೆ ದುರ್ಗದಿ ತಾನು ಸುಳಿಯಲು ಊರ ಮನೆಗಳ ತೋರಣ ಮುತ್ತುರತ್ನದ ಗೊಂಚಲುಡೆಯಲಿ ತೊನೆದು ಉಲಿದುದ ನೆನೆದಿದೆ। ಅಹುದು, ಅಂದಿನ ಅಂದವನೆ ನೆನೆದಿಂದು ಗಾಳಿಯು ಕೂಗಿದೆ ಕೂಗಿ ಆಲುತ ನನ್ನ ನೂಕುತ ಬಂಡೆ ಬಂಡೆಗು ತಾಕಿದೆ।।3।। ಬಂಡೆಯೇರುತ ನಿಂತೆ, ಕಂಡಿತು ಸುತ್ತಮುತ್ತಣ ಹಳ್ಳಿಯು ವಿದ್ಯುಚ್ಛಕ್ತಿಯ ದೀಪದುರಿಯಲಿ ದಹಿಸಿತೇನಿದೆರರ್ತ್ತಿಯು? ಕೂಗಿಕೂಗುತ, ಕೂಗಿ ಕರೆಯುತ ರೇಗುತಿದೆ ಈ ಗಾಳಿಯು ಏಳಿರೇಳಿರಿ, 'ಏಳಿರಣ್ಣಾ। ಏಕೆ ಇಂದೀ ಜಡತನ?' ।।4।। ಸುತ್ತಮುತ್ತಣ ಬರಡು ಬಯಲು, ಅತ್ತ ನಿಂದಿಹ ದುರ್ಗವು, ಎಲ್ಲ ನಿರ್ಜನವಾಗಿ ಭೀಕರ ರೂಪತಾಳಿದೆ, ಕೆರಳಿದೆ ಬಾಗಿಲಿಗೆ ಕಾಳುಗಳ ಬೀಸುತ ಜನವು ಮೈಮರೆ ತೊರಗಿದೆ; ನಿದ್ದೆಯಲಿ ನಾಳೆಗಳ ಕೋರ್ಟನು

ಕದನವನು ಕನವರಿಸಿದೆ॥5॥ ಇಲ್ಲಿ ನಿಂತಿಹ ನಾನು, ಇಂದಿನ ರೋಷವಾಂತಿಹ ಗಾಳಿಯು, ಕುಗ್ಗಿ ಮುಮ್ಮಲ ಮರುಗಿ ಹಿಂದಿನ ವೀರಗತೆಗಳ ನೆನೆವೆವು॥6॥

ಭುವನೇಶ್ವರಿಯ ನೆನೆ ಮಾನಸವೆ (ಕೀರ್ತನೆ) ರಾಗ: ಮೋಹನ ಕಲ್ಯಾಣಿ–ಆದಿತಾಳ

ಭುವನೇಶ್ವರಿಯ ನೆನೆ ಮಾನಸವೆ ಭವಬಂಧಂಗಳ ಭೀತಿಯ ಬಿಡಿಸುವೆ॥ಪ॥ ಭವದಲಿ ಬಂದೆ ನವೆಯದೆ ನೋಯದೆ ತವೆಸು ವಿಲಾಸದಿ ತಣಿಯುವೆ ಸುಖಿಸುವೆ॥ಅ.ಪ॥ ವ್ಯಜನಂಗಳನು ವಿದಳಿಪ ಮಾತೆಯೆ ತ್ರಿಜಗಜ್ಜನನಿಯ ತ್ರಿಗುಣಾತೀತೆಯ ನಿಜಭಕ್ತಾವನ ಸುರವರ ಸುರಭಿಯ ಅಜಸನ್ನುತ ಶ್ರೀ ಹರಿಕೇಶಾಂಗಿಯ॥ಚರಣ॥

ಮಾನವನಾಗಿ ಹುಟ್ಟಿದ ಮೇಲೆ ರಾಗ: ತೋಡಿ

ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ। ಸಾಯೋ ತನಕ ಸಂಸಾರದೊಳಗೆ ಗಂಡಾಗುಂಡಿ॥ಪ॥ ಹೇರಿಕೊಂಡು ಹೋಗೋದಿಲ್ಲ ಸತ್ತೋರ್ ಬಂಡಿ। ಇರೋದ್ರೊಳಗೆ ಒಮ್ಮೆ ನೋಡು ಜೋಗಾದ ಗುಂಡಿ॥1॥ ತಾಳುಗೊಪ್ಪ ತಾರೊಕೊಂಬಾ ಬೊಂಬಾಯಿಘಟ್ಟಾ। ಸಾಲುಗುಡ್ಡದ್ ಮೇಲೆ ನೋಡು ಬಳ್ಕತ್ ಮರಾ। ದಾರಿಕಡಿದು ಮಾಡಿದ್ದಾರೆ ಗುಡ್ಡಾದ್ದ್ ಬೆಟ್ಟಾ। ಪಶ್ಚಿಮ ಘಟ್ಟದ ಮೇಲೆ ನೋಡು ಮೈಸೂರು ಬಾವ್ಟಾ॥2॥ ಅಂಕುಡೊಂಕು ವಂಕು ಮೂರು ರಸ್ತೇದಾರಿ। ಹತ್ತಿ ಇಳಿದು ಸುತ್ತಿದ್ದಾಗೆ ಹಾವಿನ್ ಮರೀ। ತೊಟ್ಲಾಗೆ ಜಿಂಕೆ ಆಡಿದ್ದಾಗೆ ಮನಸಲ್ಲಾರೀ। ನಡೆಯುತ್ತದೆ ಮೈಸೂರೊಳಗೆ ಧರಾಂಧುರೀ॥3॥ ಬುತ್ತಿ ಉಣ್ಣಲಿಕ್ಕೆ ಇಲ್ಲಿ ಸೊಂಪಾಗಿದೇ। ಸೊಂಪು ಇಂಪು ಸೇರಿ ಮನಸು ತಂಪಾಗಿದೇ। ತಂಪಿನಿಂದ ಮತ್ತೊಂದೇನೊ ಕಾಣುಸ್ತದೇ। ತಂಪಿನಿಂದ ಜೀವಕ್ಕೊಂದು ಇಂಪಾಗ್ತದೇ॥4॥ ಅಡ್ಡಬದಿ ಒಡ್ಡು ನಿಲ್ಲು ನೀರಿನ್ಮೆಲೇ। ಇರೊದ್ರೊಳಗೆ ಇನ್ನೊಂದೆನೊ ಹೊನ್ನಾಲತೀ। ನೀರು ಕೆಡವಿರಾಟೆ ತಿರುಗಿ ಮಿಂಚಿನ್ ಶಕ್ತೀ। ನಾಡಿನೊಳಗೆ ಕೊಡ್ತಾರಂತೆ ದೀಪದ್ ತಂತೀ॥5॥ ಊಟ ಮುಗಿದಿದ್ರೇಳು ಮುಂದೆ ನೋಡೋದಿದೇ। ನೋಡುತ್ತಿದ್ರೆ ಮನಸು ಕೆಟ್ಟು ಹುಚ್ಚಾಗ್ತದೇ। ಬೇಕಾದ್ರಿಲ್ಲೇ ಉಡುಪಿ ಮಾವನ ಮನೆಯೊಂದಿದೇ। ಉಳಿಯೊದಾದ್ರೆ ಮಹಾರಾಜರ ಬಂಗ್ಲೇ ಇದೇ॥6॥ ನೋಡು ಗೆಳೆಯ ಜೋಕೆ ಮಾತ್ರ ಪಾತಾಳ್ ಗುಂಡೀ ಹಿಂದಕ್ಕೆ ಸರಿದು ಮುಂದಕ್ಕೆ ಬಿದ್ರೆ ಕೈ ತಪ್ಪಿದ ಗುಂಡಿ। ಕಣ್ಣುಗಳಿಗೆ ಕಾಣಿಸ್ತಾವೇ ಬೊಂಬಾಯಿ ದಂಡೀ। ನಮ್ಮ ದಂದ್ರೆ ಹೆಮ್ಮೆಯಲ್ವೆ ಜೋಗಾದ ಗುಂಡೀ॥7॥ ಶಿಶ್ತುಗಾರ ಶಿವಪ್ಪನಾಯ್ಕಾ ಕೆಳದಿನ್‌ಗಾರಾ। ಚಿಕ್ಕದೇವ ದೊಡ್ಡದೇವ ಮೈಸೂರ್‌ನವರಾ। ಹಿಂದಕ್ಕಿಲ್ಲಿ ಬಂದಿದ್ರಂತೆ ಶ್ರೀರಾಮರೂ। ಎಲ್ಲಾ ಎಲ್ಲ ಕಥೆಯ ಹೇಳುತ್ತಾರೆ ಕಲ್ಪಾಂತರು॥8॥ ರಾಜಾ ರೋರರ್ ರಾಕೇಟ್ ಲೇಡೀ ಚಾರ್ತುಮುಖ । ಹಿಂದಿನಿಂದ ಬಂದದ್ದೆನೋ ಒಂದೇ ಮತ॥9॥

ಮೈಸೂರು ಮಕ್ಕಳು ನಾವೂ ರಾಗ: ಭೀಮ್‌ಫಲಾಸ್

ಮೈಸೂರು ಮಕ್ಕಳು ನಾವೂ। ಮಾದರಿ ನಾಡೊಳು ಇರುತಿಹೆವೂ। ನಮ್ಮಯ ಧರ್ಮವ ಅರಿತಿಹೆವೂ। ಜಯ ಚಾಮಭೂಪನ ಪೊಗಳುವೆವೂ॥ಪ॥ ಮುಂದಿನ ಪ್ರಜೆಗಳು ನಾವೂ। ಹಿಂದಿನ ಕೀರ್ತಿಯ ಬೆಳಗುವೆವೂ। ಇಂದೇ ಶಪಥವ ಮಾಡುವೆವೂ। ವಂದಿಸಿ ತಾಯಡಿ ಬೀಳುವೆವೂ॥1॥ ಕನ್ನಡ ತಾಯಿಯ ಹೊಟ್ಟೆಯಲೀ। ಇನ್ನೂ ಮುಂದಕೆ ಹುಟ್ಟುತಲೀ। ಮನ್ನಣೆ ಪಡೆಯುವ ಧರೆಯಲ್ಲೀ। ಹಿರಿಯರ ಮಾತನು ಕೇಳುತಲೀ॥2॥ ಕನ್ನಡ ನಾಡಿದು ಮೈಸೂರೂ। ಕನ್ನಡ ಮಾತಿದು ಕಸ್ತೂರೀ। ಕನ್ನಡ ಕುಶಲಕೆ ಜಯಕಾರೀ। ಎನ್ನುತ ಊದುವೆವು ತುತ್ತೂರೀ॥3॥

ಮೊದಲು ತಾಯ ಹಾಲ ಕುಡಿದು ರಾಗ: ಸಾವೇರಿ

ಮೊದಲು ತಾಯ ಹಾಲ ಕುಡಿದು ಲಲ್ಲೆಯಿಂದ ತೊದಲಿ ನುಡಿದು ಕೆಳೆಯರೊಡನೆ ಬೆಳೆದುಬಂದ ಮಾತದಾವುದು। ನಲ್ಲೆಯೊಲವ ತೆರೆದು ತಂದ ಮಾತದಾವುದು॥ ಸವಿಯ ಹಾಡ ಕಥೆಯ ಕಟ್ಟಿ ಕಿವಿಯಲೆರೆದು ಕರುಳ ತಟ್ಟಿ ನಮ್ಮ ಜನರು ನಮ್ಮ ನಾಡು ಎನಿಸಿತಾವುದು। ನಮ್ಮ ಕವಿಗಳೆಂಬ ಕೋಡು ಕಲೆಗದಾವುದು॥ ಕನ್ನಡನುಡಿ ನಮ್ಮ ಹೆಣ್ಣು ನಮ್ಮ

ತೋಟದಿನಿಯ ಹಣ್ಣು। ಬಳಿಕ ಬೇರೆ ಬೆಳೆದ ಹೆಣ್ಣು ಬಳಿಗೆ ಸುಳಿದಳು। ಹೊಸದು ರಸದ ಬಳ್ಳಿ ಹಣ್ಣು ಒಳಗೆ ಸುಳಿದಳು।। ಪಡುವ ಕಡಲ ಹೊನ್ನ ಹೆಣ್ಣು। ನನ್ನ ಜೀವದುಸಿರು ಕಣ್ಣು। ನಲಿಸಿ ಕಲಿಸಿ ಮನವನೊಲಿಸಿ ಕುಣಿಸುತಿರುವವಳು।। ಒಮ್ಮೆ ಇವಳು ಒಮ್ಮೆ ಅವಳು ಕುಣಿಸುತಿರುವಳು।। ಹೀಗೆ ನನಗೆ ಹಬ್ಬವಾಗಿ ಇನಿಯರಿಬ್ಬರನ್ನು ತೂಗಿ। ಇವಳ ಸೊಬಗನವಳು ತೊಟ್ಟು ನೋಡ ಬಯಸಿದೆ। ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದೆ।। ಬಲ್ಲವರಿಗೆ ಬೆರಗೆ ಇಲ್ಲಿ ಅರಿಯದವರು ನಾಲ್ವರಲ್ಲಿ। ಕಳೆಯ ಬೆಳಕು ಹೊಳೆಯಲಂದು ದಣಿದು ಹೋದೆನು। ಬಡವನಳಿಲುಸೇವೆಯೆಂದು ಧನ್ಯನಾದೆನು।।

ಯೆಂಡ ಯೆಡ್ತಿ ಕನ್ನಡ್ ಪದಗೊಳ್

ಯೆಂಡ ಯೆಡ್ತಿ ಕನ್ನಡ್ ಪದಗೊಳ್ ಅಂದ್ರೆ ರತ್ನಂಗ್ ಪ್ರಾಣ। ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ ತಕ್ಕೊ ಪದಗಳ್ ಬಾಣ। ಭಗವಂತ್ ಏನ್ರ ಭೂಮೀಗ್ ಇಳ್ದು ನನ್ ತಾಕ್ ಬಂದಾಂತ್ ಅನ್ನು। ಪರ್‌ಗಿರೀಕ್ಸೆ ಮಾಡ್ತಾನ್ ಔನು ಭಕ್ತನ್ ಮೇಲ್ ಔನ್ ಕಣ್ಣು।। ಯೆಂಡ ಕುಡಿಯಾದ್ ಬುಟ್‌ಬುಡ್ ರತ್ನ ಅಂತ್ ಔನ್ ಏನಾರ್ ಅಂದ್ರೆ। ಮೂಗ್ ಮೂರ್ ಚೂರಾಗ್ ಮುರಸ್ಕೊಂತೀನಿ। ದೇವರ್ ಮಾತ್ಗ್ ಅಡ್ಬಂದ್ರೆ।। ಯೆಂಡ ಬುಟ್ಟೆ ಯೆಡ್ತೀನ್ ಬುಟ್ ಬುಡ್ ಅಂತ್ ಔನ್ ಏನಾರ್ ಅಂದ್ರೆ। ಕಳದೋಯ್ತು ಅಂತ ಕುಣಿದಾಡ್ತೀನಿ ದೊಡ್ಡ್ ಒಂದ್ ಕಾಟ। ತೊಂದ್ರೆ।। ಕನ್ನಡ್ ಪದಗೋಳ್ ಆಡೋದ್ನೆಲ್ಲಾ ನಿಲ್ಲಿಸ್ ಬುಡ್‌ಬೇಕ್ ರತ್ನ। ಅಂತ ಔನ್ ಏನಾರ್ ಅಂದ್ರೆ ದೇವ್ರ್ ಆದ್ರ್ ಏನು ಮಾಡ್ತೀನ್ ಔನ್ಗೆ ಖತ್ನ ಆಗ್ನೆ ಮಾಡೊ ಐಗೋಳ್ ಎಲ್ಲ ದೇವ್ರೆ ಆಗ್ಲಿ ಎಲ್ಲಾ। ಕನ್ನಡದ ಸುದ್ದೀಗ್ ಏನ್ರ ಬಂದ್ರೆ ಮಾನಾ ಉಳಸಾಕಿಲ್ಲ।। ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕಿದ್ರೂನೆ। ಮೂಗ್ನಲ್ ಕನ್ನಡ್ ಪದವಾಡ್ತೀನಿ ನನ್ ಮನಸನ್ ನೀ ಕಾಣೆ। ಯೆಂಡ ವೋಗ್ಲಿ । ಯೆಡ್ತಿ ವೋಗ್ಲಿ। ಎಲ್ಲಾ ಕೊಚ್ಕೊಂಡ್ ವೋಗ್ಲಿ। ಪರ್ಪಂಚ್ ಇರೋ ತನಕ ಮುಂದೆ ಕನ್ನಡ ಪದಗೊಳ್ ನುಗ್ಲಿ।।

ರಾಜ್ಯೋತ್ಸವದ ಶುಭೋದಯ — ರಾಗ: ಸಿಂಧುಭೈರವಿ

ರಾಜ್ಯೋತ್ಸವದ ಶುಭೋದಯ ನಾಡಿನ ಜನತೆಗೆ ನವೋದಯ। ನಮ್ಮೀ ಸಂಸ್ಕೃತಿ ವೈವಿಧ್ಯಮಯ ಸರ್ವಧರ್ಮಗಳ ಸಮನ್ವಯ।।1।। ಗಂಗ ಕಂದಬರ ಆರಂಭ ಬರೆಯಿತು ಹೆಮ್ಮೆಯ ಇತಿಹಾಸ। ಹೊಯ್ಸಳ ಸುಂದರ ಶಿಲ್ಪಕಲೆ ಕಲ್ಲಿಗೆ ಭವ್ಯತೆ ತಂದ ಕಾವ್ಯರಥ।।2।। ಓ ಕನ್ನಡ ನೆಲವೇ ಕವಿಜನರೊಲವೇ। ಲಲಿತ ಕಲೆಗಳ ಸಿರಿಸಂಪದದ। ಒಲುಮೆಯ ಪ್ರಕೃತಿ ಮಾತೆಯೆ। ನಿನ್ನಯ ಪಾದಕೆ ವಂದಿಪೆವು।।3।।

ವಿಶ್ವ ವಿನೂತನ ವಿದ್ಯಾ ಚೇತನ — ರಾಗ: ಕಲ್ಯಾಣವಸಂತ

ವಿಶ್ವ ವಿನೂತನ ವಿದ್ಯಾ ಚೇತನ ಸರ್ವಹೃದಯ ಸಂಸ್ಕಾರಿ। ಜಯ ಭಾರತಿ। ಕರುನಾಡ ಸರಸ್ವತಿ ಗುಡಿಗೋಪುರ ಸುರಶಿಲ್ಪ ಕಲಾಕೃತಿ ಕೃಷ್ಣೆ ತುಂಗೆ, ಕಾವೇರಿ ಪವಿತ್ರಿತ ಕ್ಷೇತ್ರ ಮನೋಹಾರಿ।।1।। ಗಂಗ ಕದಂಬ ರಾಷ್ಟ್ರಕೂಟಬಲ ಚಾಲುಕ್ಯ ಹೊಯ್ಸಳ ಬಲ್ಲಾಳ ಹಕ್ಕ-ಬುಕ್ಕ ಪುಲಿಕೇಶಿ ವಿಕ್ರಮರ ಚೆನ್ನಮ್ಮಾಜಿಯ ವೀರಶ್ರೀ।।2।। ಆಚಾರ್ಯತ್ರಯ ಮತಸಂಸ್ಥಾಪನ ಬಸವಾಲ್ಲಮ ಅನುಭಾವ ನಿಕೇತನ। ಶರಣದಾಸ ತೀರ್ಥಂಕರ ನಡೆ ನುಡಿ ವಿಶ್ವತಮೋಹಾರಿ ।।3।। ಪಂಪ ರನ್ನ, ನೃಪತುಂಗ ಹರೀಶ್ವರ ರಾಘವಾಂಕ ಸರ್ವಜ್ಞ ಪುರಂದರ ಕುಮಾರವ್ಯಾಸ ರತ್ನಾಕರ ಜನಪದ ಕಾವ್ಯ ಸಮುದ್ರ ವಿಹಾರಿ।।4।। ಸಾಯಣ ವಿದ್ಯಾರಣ್ಯ ಭಾಸ್ಕರ ಮಹಾದೇವಿ ಮುಕ್ತಾಯಿ ಮಹಂತರ ಕಂತಿ, ಹಂಪ ಸುಮನೋರಮೆ ಮುದ್ದಣ್ಣ ಸರಸ ಹೃದಯ ಸಂಚಾರಿ।।5।। ತ್ಯಾಗಭೋಗ-ಸಮಯೋಗದ ದೃಷ್ಟಿ ಬೆಳುವೊಲ, ಮಲೆಗಳ ಸುಂದರ ಸೃಷ್ಟಿ ಜ್ಞಾನದ ವಿಜ್ಞಾನದ ಕಲೆಯೈಸಿರಿ ಸಾರೋದಯ ಧಾರಾನಗರಿ।।6।। ಅರಿವೆ ಗುರು ನುಡಿ ಜ್ಯೋತಿರ್ಲಿಂಗ ದಯವೇ ಧರ್ಮದ ಮೂಲತರಂಗ। ವಿಶ್ವಭಾರತಿಗೆ ಕನ್ನಡದಾರತಿ ಮೊಳಗಲಿ ಮಂಗಲ ಜಯಭೇರಿ।।7।।

ಶ್ರೀಗಂಧದ ಕನ್ನಡ — ರಾಗ: ಕಲ್ಯಾಣವಸಂತ

ಶ್ರೀಗಂಧದ ಕನ್ನಡ ತುಂಬಿದಂಥ ಜೇನ್ ಕೊಡ।।ಪ।। ಪೈರು ಪಚ್ಚೆ ಹೂವು ಹಣ್ಣು ಎಲ್ಲ ನಮ್ಮ ಕನ್ನಡ। ಸುಗ್ಗಿ ಹಿಗ್ಗು

ಹಾಲು ಬುಗ್ಗೆ ಹರಿಸುವಂಥ ಕನ್ನಡ। ಕಾವೇರಿ ಗೋದಾವರಿ ಪುಣ್ಯತೀರ್ಥ ಕನ್ನಡ ಆ ಆ ಆ ಓ ಹೋ ಹೋ॥1॥ ಸಹ್ಯಾದ್ರಿಯ ಯೋಗನಿದ್ರೆ ಪಡುಗಡಲ ಜೋಗುಳ। ಪುಣ್ಯತೀರ್ಥ ಕೋಟಿತೀರ್ಥ ಪಾವನವೆ ಈ ನೆಲ। ಶರಾವತಿಯ ಜೋಗದಲ್ಲಿ ಮಿಂದ ಮನವೆ ನಿರ್ಮಲ। ಆ ಆ ಆ ಆ ಓ ಹೊ ಹೋ॥2॥ ಪಂಪ ರನ್ನ ಜನ್ನರೆಲ್ಲ ಒಲಿಸಿಕೊಂಡ ಕನ್ನಡ। ಕುಮಾರವ್ಯಾಸ ರಾಘವಾಂಕ ಮೆರೆಸಿದಂಥ ಕನ್ನಡ। ಹಂಪೆ ತುದಿಗೆ ಸಿರಿಯ ಮುಡಿಗೆ ಬೆಳೆಸಿದಂಥ ಕನ್ನಡ ಆ ಆ ಆ ಓ ಹೊ ಹೋ॥3॥

ಸರ್ ಎಂ ವೀಯರ ಕನ್ನಂಬಾಡಿಯು **ಲಾವಣಿ**

ಸರ್ ಎಂ ವೀಯರ ಕನ್ನಂಬಾಡಿಯು। ಶೋಭಿಸುತಿಹುದೀ ಯುಗದಲ್ಲಿ। ಕಡೂರು ಕಿತ್ತಳೆ ಮಧುಗಿರಿ ದಾಳಿಂಬೆ। ದಾವಣಗೆರೆಯ ನೆಲಗಡಲೆ। ದಾರಾಪುರದಲ್ಲಿಹ ತುಪ್ಪ ಊಟಕ್ಕೆ ರುಚಿ ಸೋಸಲೆ ಭತ್ತ। ಪ್ರಕೃತಿ ಸೊಬಗನು ಅನುಭವಿಸಲು। ನೀವು ನೋಡಿರಿ ಜೋಗದ ಜಲಪಾತ॥ ಕಾವೇರಿಯು ನೀಡಿರುವಳು ನೋಡಿ ಶಿವನ ಸಮುದ್ರದ ವಿದ್ಯುತ್। ಮೈಸೂರಲ್ಲಿ ಪೆಸರಾಗಿದೆ ನೋಡಿ। ಭದ್ರಾವತಿಯು ಕಾಗದಕೆ। ತುಮಕೂರು ಅದು ಬಳಪಕ್ಕೆ। ಹರಪ್ಪನ ಹಳ್ಳಿ ತಾ ಹಾಸ್ಯಕೆ। ತಾಂಬೂಲ ಹಾಕಲು ಇಷ್ಟ ಉಳ್ಳವರು। ಕೊಳ್ಳಿರಿ ಶಿವಮೊಗ್ಗದ ಅಡಿಕೆಯನು। ಮತ್ತೊಂದಿದೆ ನೀವು ಮರೆತಿರಿ ನೋಡಿ ಧರಿಸಿರಿ ಬದನ್ವಾಳ್ ಖಾದಿಯನು। ಕುಡಿಯಿರಿ ಚಿಕ್ಕಮಂಗಳೂರು ಕಾಫಿಯನು। ಪಡೆಯಿರಿ ಕನಕಪುರದ ರೇಷ್ಮೆಯನು॥ ದ್ರೋಣಪರ್ವತದ ಸೂರ್ಯನ ಉದಯ। ಆಗುಂಬೆಯ ಸೂರ್ಯಾಸ್ತಮ। ಜನಗಳ ಮನವನು ಸೆಳೆದಿದೆ ನೋಡಿ। ಪಶ್ಚಿಮವಾಹಿನಿ ತೀರ್ಥವದು॥ ಒಮ್ಮ ತದಿಂದ ಪ್ರಾರ್ಥಿಸಿ ನೀವು। ಹಂಪೆಯ ಶ್ರೀ ವಿರೂಪಾಕ್ಷನನು। ಸ್ಮ ರಿಸಿರಿ ಕೋಟೆ ಆಂಜನೇಯನ। ಶ್ರವಣ ಬೆಳಗೊಳದ ಗೊಮ್ಮ ಟನ। ಶಿಲಾಬಾಲಿಕಾ ಬೇಲೂರಿನಲಿ ಶಾರದಾಂಬೆ ತಾ ಶೃಂಗೇರಿಯಲಿ। ಇವರೆಲ್ಲರಿಗೂ ಮಿಗಿಲಾಗಿ ರುವಳು ಬೆಟ್ಟದ ಮೇಲಿನ ಚಾಮುಂಡಿ॥

ಸುಲಲಿತ ಕಲೆಗಳ ಕನ್ನಡ ನಾಡು **ರಾಗ: ಮೋಹನ**

ಸುಲಲಿತ ಕಲೆಗಳ ಕನ್ನಡ ನಾಡು ಸೌಂದರ್ಯ ರಾಣಿಯ ಚೆಲುವಿನ ಬೀಡು॥ ವಿಧವಿಧ ರಂಜಿಪ ಸುಂದರ ನಾಡು ಮಧುರ ಮಧುರಮಯ ಕಂಪಿನ ಬೀಡು॥1॥ ಪರಿಮಳ ವೃಕ್ಷ ಸೌಂಗಧದ ನಾಡು। ಸಿರಿಸೌಭಾಗ್ಯದ ಸಂಪದ ನಾಡು। ಸುರ ಸಂಗೀತದ ಸೊಬಗಿನ ನಾಡು॥ ಕೃತಿ ಗತಿ ಲಯ ಸ್ವರ ತಾಳ ಮೃದಂಗದಿ। ಚದುರತೆ ಬೀರುವ ಚದುರರ ನಾಡು॥2॥ ಭುಧ ಜನ ಪಂಡಿತ ಕವಿಗಳ ನಾಡು। ಸದಮಲ ಹೃದಯದ ರಸಿಕರ ನಾಡು। ಸುಧೆಯ ತುಂಗೆ ಕಾವೇರಿಯ ನಾಡು। ಪದುಮನಾಭ ಶ್ರೀರಂಗನ ನಾಡು॥3॥

ಸೊಕ್ಕಿನಲಿ ತಲೆಎತ್ತಿ ಜೊತೆಯವರ **ರಾಗ: ಶುದ್ಧಧನ್ಯಾಸಿ**

ಸೊಕ್ಕಿನಲಿ ತಲೆಎತ್ತಿ ಜೊತೆಯವರ ಕೂಟದಲಿ ನಾವು ಸಮ ನಿಮಗೆಂದು ನುಡಿವ ಬಲವಿಲ್ಲ। ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆಬಿದ್ದು। ಯಾವ ಮಂಕೋ ಕವಿದು ಹುದುಗಿರುವೆವೆಲ್ಲಾ॥ ರೊಕ್ಕ ಕೈಯೊಳಗಿಲ್ಲ ಹುರುಪು ಮೈಯೊಳಗಿಲ್ಲ। ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟೆವಲ್ಲ। ಅಕ್ಕ ತಂಗಿಯರೆಲ್ಲ ಮುಂದು ಮುಂದಾಗಿರಲು। ನಮ್ಮ ತಾಯಿಯೊಬ್ಬಳೆ ಸೊರಗಿರುವಳಲ್ಲ॥ ಅಮ್ಮನನು ಕೈ ಬಿಡದೆ ಇನ್ನು ನಡೆಸುವೆವೆ। ಹಿರಿಯ ಹೆಸರನು ತಿರುಗಿ ಗಳಿಸಿ ಕೊಳ್ಳುವೆವೇ? ಸರಿಯವರ ತಲೆ ಮೆಟ್ಟಿ ಮುಂದೆ ನಿಲ್ಲುವೆವೇ। ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೇ?॥

ಹಚ್ಚೇವು ಕನ್ನಡದ ದೀಪ **ರಾಗ: ನಾದನಾಮಕ್ರಿಯ**

ಹಚ್ಚೇವು ಕನ್ನಡದ ದೀಪ ಕರುನಾಡ ದೀಪ ಸಿರಿನುಡಿಯ ದೀಪ। ಒಲವೆತ್ತಿ ತೋರುವಾ ದೀಪ॥ಪ॥ ಬಹಳ ದಿನಗಳಿಂದ ಮೈಮರವೆಯಿಂದ। ಕೂಡಿರುವ ಕೊಳೆಯನ್ನು ಕೊಚ್ಚೇವು। ಎಲ್ಲೆಲ್ಲು ಕನ್ನಡದ ಕಂಪಸೂಸಿ। ಅಲ್ಲಲ್ಲಿ ಕಿರಣಗಳ

ಚಾಚೀವು॥1॥ ನಮ್ಮವರು ಗಳಿಸಿದಾ ಹೆಸರನ್ನು ಉಳಿಸಲು। ಎಲ್ಲಾರು ಒಂದುಗೂಡೇವು। ನಮ್ಮೆದೆಯು ಮಿಡಿಯುವೀ ಮಾತಿನಲಿ। ಮಾತೆಯ ಪೂಜೆಯ ಮಾಡೇವು॥2॥ ಮರೆತೇವು ಮರವ ತೆರೆದೇವು ಮನವ। ಎರೆದೇವು ಒಲವ ಹಿಡಿ ನೆನಪ ನರನರವನೆಲ್ಲಾ ಹುರಿಗೊಳಿಸಿ ಹೊಸೆದು । ಹಚ್ಚೀವು ಕನ್ನಡದ ದೀಪ॥3॥ ನಡುನಾಡೆ ಇರಲಿ ಗಡಿನಾಡೆ ಇರಲಿ ಕನ್ನಡದ ಕಳೆಯನ್ನು ಕೊಚ್ಚೀವು ನಮ್ಮುಸಿರು ತೀಡುವೀ ನಾಡಿನಲಿ ಮಾಂಗಲ್ಯ ಗೀತೆಯ ಹಾಡೇವು॥4॥

ಹೆಸರಾಯಿತು ಕರ್ನಾಟಕ **ರಾಗ: ಸಿಂಧುಭೈರವಿ**

ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ। ಹಸಿಗೋಡೆಯ ಹರಳಿನಂತೆ ಹುಸಿಹೋಗದೆ ಕನ್ನಡ॥ ಹೊಸೆದ ಹಾಗೆ ಹುರಿಗೊಳ್ಳುವ ಗುರಿತಾಗುವ ಕನ್ನಡ। ಕುರಿತೋದದ ಪರಿಣತಮತಿ ಅರಿತವರಿಗೆ ಹೊಂಗೊಡ॥ ಪಡುಗಡಲಿನ ತೆರೆಗಳಂತೆ ಹೆಡೆ ಬಿಚ್ಚುತ ಮೊರೆಯುವ। ಸಹ್ಯಾದ್ರಿಯ ಶಿಖರದಂತೆ ಬಾನೆತ್ತರ ಕರೆಯುವ॥ ಗುಡಿಗೋಪುರ ಹೊಂಗಳಸಕೆ ಚೆಂಬೆಳಕಿನ ಕನ್ನಡ। ನಮ್ಮೆಲ್ಲರ ಮೈಮನಸಿನ ಹೊಂಗನಸಿನ ಕನ್ನಡ॥ ತ್ರಿಪದಿಯಿಂದ ಸಾಸಿರ ಪದಿ ಸ್ವಚ್ಛಂದದ ಉಲ್ಲಸ। ಭಾವಗೀತ ಮಹಾಕಾವ್ಯ ವೀರವಿನಯ ಸಮರಸ॥ ಹಳ್ಳಿ ಊರು-ನಗರ ಜಿಲ್ಲೆ ಮೊಗದ ಹೊಗರು ಕನ್ನಡಿ। ಎಲ್ಲ ದಿಸೆಗು ಚೆಲ್ಲುವರಿದ ಚೈತನ್ಯದ ದಾಂಗುಡಿ॥ಹೆಸರಾಯಿತು॥

ಹೊತ್ತಿತೋ ಹೊತ್ತಿತು ಕನ್ನಡದ ದೀಪ **ರಾಗ: ಮೋಹನ**

ಹೊತ್ತಿತೋ ಹೊತ್ತಿತು ಕನ್ನಡದ ದೀಪ ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ। ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ ಹರ್ಷವುಕ್ಕಿಸುವಂತೆ ಶೋಭಾಯಮಾನ। ಕನ್ನಡದ ಮನೆಯಾಗೆ ಜ್ಯೋತಿರ್ನಿಧಾನ। ಕನ್ನಡದ ಪ್ರಾಣ ಕನ್ನಡ ಮಾನ॥ ಉರಿವವರು ಬೇಕಿನ್ನು ಇದರೆಣ್ಣೆಯಾಗಿ। ಸುಡುವವರು ಬೇಕಿನ್ನು ನಿಡು ಬತ್ತಿಯಾಗಿ। ಧರಿಸುವರು ಬೇಕಿದನು ಸಿರಿ ಹಣತೆಯಾಗಿ। ನನ್ನಿಯುಸಿರಾಗಿ ಧರ್ಮಕ್ಕೆ ಬಾಗಿ॥ ಚಿರಕಾಲ ಬೆಳಗಲೀ ಕನ್ನಡದ ದೀಪ। ಜನಕೆಲ್ಲ ಬೆಳಕಾಗಿ ಪುಣ್ಯ ಪ್ರದೀಪ। ಭಾರತಕೆ ಬಲವಾಗಿ ಭವ್ಯಪ್ರದೀಪ। ಕಳೆಯುತ್ತ ತಾಪ ಬೆಳೆಸುತ್ತ ಸೈಪ॥

ನುಡಿನಮನ

ಓ ಮಗನೇ ನಮ್ಮ ನುಡಿ

ಓ ಮಗನೇ ನಮ್ಮ ನುಡಿ ಬಹಳ ಪ್ರಾಚೀನ ಮನೆಯೊಳಗೆ ನೋಡು ಅದಕೀಗ ಇಲ್ಲ ಸ್ಥಾನ ಮನೆಯಿಂದ ಹೊರಗಟ್ಟಿದೆವೋ ಅಮ್ಮ ಅಪ್ಪ ಒಳ ಬಂದು ನುಸುಳಿದರು। ಅಗೋ ಮಮ್ಮಿ ಪಪ್ಸ್।

ಕನ್ನಡ ನಾಡಸಿರಿ ಸಾಧುಗೆ (ಕಪ್ಪೆ ಅರಭಟ್ಟಶಾಸನ, ತ್ರಿಪದಿ)

ಕನ್ನಡ ನಾಡಸಿರಿ ಸಾಧುಗೆ ಸಾಧು। ಮಾಧುರ್ಯನ್ಗೆ ಮಾಧುರ್ಯಂ, ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್, ಮಾಧವನೀತನ್ ಪೆರನಲ್ಲ।

ಕನ್ನಡನಾಡೊಳು ಕಲಿಯುಗ (ಸಂಚಿಯ ಹೊನ್ನಮ್ಮ)

ಕನ್ನಡ ನಾಡೊಳು ಕಲಿಯುಗ ಪುಗದಿರ್ಕೆ। ಕನ್ನಡಿಗರು ಘನರಕ್ಕೆ ಉನ್ನತಿವಡೆಗೆಯಾಗರ। ದೇಗುಲಗಳು ತವರು ಸನ್ನುತಿವಡೆಗೆ ಸತ್ಯಗಳು ಪ್ರಶಂಸೆ।

ಕನ್ನಡದ ನುಡಿಯೆಂದುಪೇಕ್ಷಿಸಲಿನ್ನು

ಕನ್ನಡದ ನುಡಿಯೆಂದುಪೇಕ್ಷಿಸಲಿನ್ನು। ಹಿರಿಯರಿಗಂಜಿ ನುಡಿವೆನು। ಕನ್ನಡಿಯೆ ದರ್ಪಣವದಲ್ಲದೆ ಬೇಧವೇನಿದಕೆ।

ಮುನ್ನಮುಪನಿಷದರ್ಥವನು ಸಂಪನ್ನ ಮತಿಗಳು। ಪೇಳ್ದುದನೆ ನಾ ಕನ್ನಡಿಸಿದೆನು ಕೊರತೆಯಿರ್ದೊಡೆ ಮನ್ನಿಸುವುದೊಲಿದು॥

ಕನ್ನಡದ ನೆಲದ ಪುಲ್ಲೆಮಗೆ

ಕನ್ನಡದ ನೆಲದ ಪುಲ್ಲೆಮಗೆ ಪಾವನ ತುಳಸಿ। ಕನ್ನಡದ ನೆಲದ ಕಲ್ಲೆಮಗೆ ವರಸಾಲಿಗ್ರಾಮಶಿಲೆ। ಕನ್ನಡ ನೀರ್ವೊನಲು ದೇವನದಿ ಕನ್ನಡಂ। ದೈವಮ್ಮೈ ಕನ್ನಡದ ನೆಲದ ಶಬ್ದವೆಮಗೋಂಕಾರ। ಕನ್ನಡದ ನುಡಿ ಅದ್ಭುತ ಗಾಯತ್ರಿಮಂತ್ರ। ಇನ್ನಾವುದೈ ಪೆರತು ಕನ್ನಡದ ಸೇವೆಗಿಂತಂ ಅಧಿಕಂ ಈ ಧರೆಯೊಳು॥

ಕನ್ನಡವು ಹಿರಿದೊಂದು ಸಂಸ್ಕೃತಿ

ಕನ್ನಡವು ಹಿರಿದೊಂದು ಸಂಸ್ಕೃತಿ। ಕನ್ನಡವು ಹಿರಿದೊಂದು ಜ್ಞಾನವು। ಕನ್ನಡದ ಕಸ್ತೂರಿವಾಸನೆ ಲೋಕ ತುಂಬಿಹುದು। ಕನ್ನಡದ ನುಡಿ ಕಿವಿಗೆ ಮಧುರವು। ಕನ್ನಡದ ನುಡಿ ಮಧುರ ಜೇನುವು। ಕನ್ನಡ ಸಿರಿ ಸೊಬಗ ವರ್ಣಿಪರಾರು ಲೋಕದಲಿ॥

ಕಾವೇರಿಯಿಂದಮಾ (ನೃಪತುಂಗ-ಕವಿರಾಜಮಾರ್ಗ) ರಾಗ: ಹಿಂದೂಸ್ಥಾನಿಕಾಪಿ, ಆದಿತಾಳ

ಕಾವೇರಿಯಿಂದಮಾ ಗೋದಾವರಿ ವರಮಿರ್ಪ। ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ। ವಸುಧಾವಳಯ ವಿಲೀನವಿಶದ ವಿಷಯ ವಿಶೇಷಂ ಅದರೊಳಗಂ ಕಿಸುವೊಳಲಾವಿಧಿತ ಮಹಾಕೊಪಣ ನಗರದಾ। ಪುಲಿಗೆರೆಯಾ ಸದಭಿಸ್ತುತಮುಪ್ಪೊಂಕುಂದದ ನಡುವಣ। ನಾಡೆ ಕನ್ನಡದ ತಿರುಳ್ ಪದನರಿದು ನುಡಿಯಲುಂ। ನುಡಿದುದನರಿದಾರಯಲು ಮಾರ್ಪರಾ ನಾಡ ವರ್ಗಳ್। ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ। ಪರಿಣತ ಮತಿಗಳ್ ಅರಿದಾದಂ ಕನ್ನಡದೊಳ್ತಿರಿ। ಕೊರೆಗೊಂಡರಿಯೆ ಪೇಳ್ವೆನೆಂಬುದಿದಾರ್ಗಂ। ಪರಮಾಚಾರ್ಯರ ವೋಲ್ ಸೈತಿರಲರಿಯರ್ ಕನ್ನಡಕ್ಕೆ ನಾಡವರೋಜರ್॥

ಜನರು ಕರ್ನಾಟಕದವರು ಬಲು ಘನರು

ಜನರು ಕರ್ನಾಟಕದವರು ಬಲು ಘನರು। ದಾನದ ದೃಢದ ಪದ್ಮಾಸನರು ಪರಹಿತಕಾಗಿ। ಜೀವವ ತೇದ ವಾಮನರು ವಿನಯದಿಂದೈತರಲಿ। ಮೇಣ್ ಕಡು ಮುನಿಸಿನಿಂದಲೆ ಬರಲಿ. ಕರೆದು। ಒಳಮನೆಯ ಸರ್ವಸ್ವವನು ಸುರಿವರು ಕರ್ನಾಟಕರು॥

ಪಾರುಮಾಡೆಮ್ಮ ನೀ

ಪಾರುಮಾಡೆಮ್ಮ ನೀ ಕಂಗ್ಲೀಷಿನಿಂದ। ಪೂತನಿಯ ಅಸುವೀಂಟಿ ಕೊಂದಗೋವಿಂದ। ತಾಯಿಮೊಲೆಯಂದದಲಿ ತೋರ್ಪವಳ। ಕಬ್ಬಿಣಧ ಹೇರೆದೆಯ ಕೆಚ್ಚಲನು ಬಾಯ್ಗಿಟ್ಟು। ತುಟಿ ಹರಿದು ರಕ್ತಸೋರುವ ನಮ್ಮನು ಒಲಿದು। ಕಾಪಾಡಯ್ಯ। ಮಕ್ಕಳೆ ಆಯುವ ಕಾಪಾಡಯ್ಯ।

ಮಾತು ಮಾತಿಗೆ ಲೈಟು ಟೇಬಲ್ಲು

ಮಾತು ಮಾತಿಗೆ ಲೈಟು ಟೇಬಲ್ಲು ರೂಮು। ಪೆನ್ನು ಪೇಪರು ಬುಕ್ಕು ಕರ್ಚೀಪು ಗೇಮು। ಮುಂದುವರಿದರೆ ಇಂಥ ಶಬ್ದಗಳ ಧಾಳಿ। ಶೀಘ್ರದಲ್ಲಿ ತೆಗೆಯುವುದು ಕನ್ನಡ ದಿವಾಳಿ॥

ಸಕ್ಕದಮಂ ಪೇಳ್ವೊಡೆ ನೆರೆ

ಸಕ್ಕದಮಂ ಪೇಳ್ವೊಡೆ ನೆರೆ। ಸಕ್ಕದಮಂ ಪೇಳ್ಗೆ ಶುದ್ದ ಕನ್ನಡದೊಳ್। ತಂದಿಕ್ಕುವುದೇ ಸಕ್ಕದಮಂ ತಕ್ಕುದೆ। ಬೆರೆಸಲ್ಕೆ ಘೃತಮುಮಂ ತೈಲಮುಮಂ॥

ಸುಲಿದ ಬಾಳೆಯ ಹಣ್ಣಿನಂದದಿ

ಸುಲಿದ ಬಾಳೆಯ ಹಣ್ಣಿನಂದದಿ। ಕಳೆದ ಸಿಗುರಿನ ಕಬ್ಬಿನಂದದಲಿ। ಅಳಿದ ಉಷ್ಣದ ಹಾಲಿನಂದದಿ। ಸುಲಭವಾಗಿರ್ಪ॥ ಲಲಿತವಹ ಕನ್ನಡದ ನುಡಿಯಲಿ। ತಿಳಿದು ತನ್ನೊಳು ತಾನು ಮೋಕ್ಷವ। ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು॥

ಆರತಿ

ಆರತಿಯು ನಿನಗಮ್ಮ — ರಾಗ: ಸಾರಂಗ

ಆರತಿಯು ನಿನಗಮ್ಮ। ಆರತಿಯು ನಿನಗೆ। ಕನ್ನಡದ ಕುಲಜನರ ಮುಕ್ಕೋಟಿ ಮಕ್ಕಳ। ಆರತಿಯು ನಿನಗೆ। ದೀಪದಾರತಿಯು ನಿನಗೆ॥ಪ॥ ಹಸಿರು ಉಯ್ಯಾಲೆಯಲಿ। ಹೊಸ ಮಲ್ಲಿಗೆ ಹರಡಿ। ಭುವಿಗೊಡತಿ ನೀನೆಂದು। ಭುವನೇಶ್ವರಿ ಎಂದು॥1॥ ಕನ್ನಡದ ಕಸ್ತೂರಿ ತಿಲಕವಿಟ್ಟು। ಕರ್ನಾಡ ದೇಗುಲದಿ ನಿನ್ನ ಇಟ್ಟು। ಕನ್ನಡಾಂಬೆಯು ನೀನು। ಹರಸು ಶುಭ ನಮಗೆಂದು॥2॥

ದೇಶಭಕ್ತಿಗೀತೆಗಳು

ಪ್ರಾರ್ಥನೆ

ಎಲ್ಲರಿಗೂ ಉಣಿಸಿ ತಿನಿಸಿ — ರಾಗ: ಮೋಹನ

ಎಲ್ಲರಿಗೂ ಉಣಿಸಿ ತಿನಿಸಿ ಎಲ್ಲರ ಕಂಬನಿಯನೊರೆಸಿ। ಎಲ್ಲೆಡೆಗೂ ಪ್ರೀತಿ ಹೂವ ಅರಳಿಸಿರುವ ಭಾರತಿ॥ಪ॥ ಸಲ್ಲದುದನು ಸಹಿಸದಾಕೆ ಸತ್ಯಧರ್ಮ ಎಡಕೆ ಬಲಕೆ। ಪಲ್ಲವಿಸಿಹ ದಯಾದೃಷ್ಟಿ ನಿನ್ನ ಕೀರುತಿ॥1॥ ನೂರು ಹಕ್ಕಿ ಉಲಿವ ತೋಟ ನೂರು ಬಣ್ಣ ಬೆಡಗು ನೋಟ। ಉತ್ತಮಿಕೆಯ ಬೆಳೆದು ಸುತ್ತಿ ಸುಳಿವ ಸಂಸ್ಕೃತಿ॥2॥ ನಿನ್ನಿಂದಲೆ ನಮಗೆ ಹೆಸರು ನೀನೆ ತಾಯಿ ನಮ್ಮ ಉಸಿರು। ನಿನ್ನ ಬೆಳಕೆ ನಮ್ಮ ಬೆಳಕು ನಮೋ ಭಾರತಿ॥3॥ ನಮ್ಮೆಲ್ಲರ ಮತವು ಬೇರೆ ನಮ್ಮೆಲ್ಲರ ಭಾಷೆ ಬೇರೆ। ನಮ್ಮೆಲ್ಲರ ತಾಯಿ ನೀನು ನಮೋ ಭಾರತಿ॥4॥

ಜನನೀ ಜನ್ಮಭೂಮಿ ಭಾರತಮಾತೆ — ರಾಗ: ಅಭೇರಿ

ಜನನೀ ಜನ್ಮಭೂಮಿ ಭಾರತಮಾತೆ। ನಿನ್ನೊಡಲಲಿ ಜನಿಸಿಹ ನಾವೇ ಧನ್ಯ ನಿನ್ನ ಮಡಿಲಲಿ ಇರುವುದೇ ನಮಗೆ ಮಾನ್ಯ॥ಪ॥ ನಿನ್ನ ಕುವರರ ಬೆಳೆಸಿದ ಧೀಮಂತೆ। ನಿನ್ನ ಕರುಣೆಯು ನಮಗೆ ಸ್ಥಿರವಂತೆ। ನಿನ್ನ ಕೊಡಗೆಯು ನದಿಗಳ ವರಮಾಲೆ। ನವರತ್ನಗಳಡಗಿದ ಗಿರಿಸಾಲೆ॥1॥ ನಿನ್ನ ಕುವರರಲಿ ಭೇದವು ಇರಬಹುದು। ಸಂಸ್ಕೃತಿ ಕಲೆಯಲಿ ಭಿನ್ನವಹುದು। ಆದರು ನಿನ್ನ ಸಂತತಿ ಒಂದಿಹುದು। ನಾವು ತೊಡುವೆವು ಪಣವನು ಇಂದು॥2॥ ನಮಗಿಲ್ಲಿ ಇಲ್ಲ ಯಾವುದು ಕೊರತೆ। ಎಲ್ಲವ ನೀಡಿಹೆ ನೀ ದಯಾವಂತೆ। ನಿನಗಾಗಿ ದುಡಿವುದೇ ನಮ್ಮೆಲ್ಲರ ಚಿಂತೆ। ನಮಿಪೆವು ನಾವು ಭಾರತ ಮಾತೆ॥3॥